

2018–19ನೇ ಸಾಲಿನ ನೂತನ ಪಠ್ಯಕ್ರಮಕ್ಕೆ ಅನುಸಾರವಾಗಿ

॥ ರಚಿಸಲಾದ ಸಮಾಜ ವಿಜ್ಞಾನ ವಿಷಯದ ॥

# ಜ್ಞಾನ ಕಲ್ಯಾಣ

## ನಿಧಾನಗತಿಯ ಕಲಿಕೆಯವರ ನಡೆ ಉತ್ತೀರ್ಣದೆಡೆಗೆ





"ಬಸವಕಲ್ಯಾಣದ ನಡೆ ಜ್ಞಾನದ ಕಡೆ"

10ನೇ ತರಗತಿಯ ಸಮಾಜ ವಿಜ್ಞಾನ ಪಾಸಿಂಗ್ ಪ್ಯಾಕೇಜ್



ಪ್ರಕಟಣೆ : ಸಂಪನ್ಮೂಲ ಶಿಕ್ಷಕರು
**ಶ್ರೀ ಬಾಳೇಶ ಹತ್ತರಕಿ ಸಹ ಶಿಕ್ಷಕರು**
ಸರಕಾರಿ ಪ್ರೌಢ ಶಾಲೆ ಹಿರನಾಗಾಂವ
ತಾ. ಬಸವಕಲ್ಯಾಣ ಜಿ. ಬೀದರ

# ಆಶಯ ನುಡಿ

ಎಸ್.ಎಸ್.ಎಲ್.ಸಿ ತರಗತಿಯು ಒಂದು ಮಹತ್ವಪೂರ್ಣವಾದ ಕಾಲಘಟ್ಟವಾಗಿದೆ ಕಲಿಕೆಯಲ್ಲಿ ಜಾಣ, ಮಧ್ಯಮ, ಹಾಗೂ ಹಿಂದುಳಿದ ವಿಧ್ಯಾರ್ಥಿಗಳಿರುವುದು ಸರ್ವೇಸಾಮಾನ್ಯ.ನಾನು ಕಲಿಕೆಯಲ್ಲಿ ಹಿಂದುಳಿದ ವಿಧ್ಯಾರ್ಥಿಗಳನ್ನು ಆಧಾರವಾಗಿಟ್ಟುಕೊಂಡು ಸಮಾಜ ವಿಜ್ಞಾನ ವಿಷಯದ "ಕನಿಷ್ಟ 40 ಅಂಕ ಪಡೆಯಲು" ಪಾಸಿಂಗ್ ಪ್ಯಾಕೇಜ" ಸಿದ್ಧಪಡಿಸಿದ್ದೇನೆ.

ಒಂದು ಪ್ರಕಟಣೆಯಿಂದ ಇನ್ನೊಂದು ಪ್ರಕಟಣೆಯತ್ತ ಸಾಗುವಾಗ ಕ್ರಿಯಾಶೀಲ ಮನಸ್ಸು ವಿಕಸನಗೊಳ್ಳುತ್ತ, ಪಕ್ವಗೊಳ್ಳುತ್ತಾ, ಹೋಗುತ್ತದೆ ಎಂಬುವುದಕ್ಕೆ ಈ ಹೊತ್ತಿಗೆಯೇ ಸಾಕ್ಷಿ. ಈ ಪ್ರಕಟಣೆಯಲ್ಲಿ ಅತಿ ಮುಖ್ಯವಾದ ಪರಿಕಲ್ಪನೆಗಳನ್ನು ಎಸ್. ಎಸ್. ಎಲ್. ಸಿ ವಾರ್ಷಿಕ ಪರೀಕ್ಷೆ ಆಧಾರವಾಗಿಟ್ಟುಕೊಂಡು ರಚನೆ ಮಾಡಿದ್ದೇನೆ. ವಿಧ್ಯಾರ್ಥಿಗಳು ಮನೆಯಂಗಳದಿಂದ ಪಾಠಶಾಲೆಗೆ ಅಡಿಯಿಡುತ್ತಾ ಹತ್ತು ಸಂವತ್ಸರ ಕಳೆಯುವ ಸಂದರ್ಭದಲ್ಲಿ ವಿಧ್ಯಾರ್ಥಿಗಳು ಈ ಸಮಾಜ ವಿಜ್ಞಾನ ವಿಷಯದ ಪಾಸಿಂಗ್ ಪ್ಯಾಕೇಜ ಸಮಗ್ರವಾಗಿ ಅಧ್ಯಯನ ಮಾಡಿ ತಮ್ಮ ಕಲಿಕೆಯನ್ನು ಧೃಡಪಡಿಸಿಕೊಳ್ಳಬೇಕೆಂದು ಕೋರುತ್ತೇನೆ. ಸರಳ ನಿರೂಪಣೆ, ಅಚ್ಚುಕಟ್ಟಾದ ಒಕ್ಕಣೆ, ವಿಶೇಷ ಮಾಹಿತಿಗಳ ಜೋಡಣೆ, ಸೂಕ್ತ ಕೋಷ್ಟಕದೊಂದಿಗೆ ಪಠ್ಯವನ್ನು ನೀಡುವ ಪ್ರಯತ್ನ ಮಾಡಿದ್ದೇನೆ.

ಈ ಪಾಸಿಂಗ್ ಪ್ಯಾಕೇಜನ ಗುರಿ ಹಿಂದುಳಿದ ವಿಧ್ಯಾರ್ಥಿ ಉತ್ತೀರ್ಣವಾಗುವಂತೆ ಮಾಡುವುದಾಗಿದೆ. 2019ರ ಎಸ್. ಎಸ್. ಎಲ್. ಸಿ ಪರೀಕ್ಷೆ ಬರೆಯುವ ಮಕ್ಕಳಿಗೆ ಹಾಗೂ ಮಕ್ಕಳನ್ನು ಸಿದ್ಧಪಡಿಸುವ ಸಮಾಜ ವಿಜ್ಞಾನ ವಿಷಯ ಶಿಕ್ಷಕರಿಗೆ ಅನೂಕೂಲವಾಗಬಹುದು ಎಂಬ ಆಶಯದೊಂದಿಗೆ ಈ ಸಮಾಜ ವಿಜ್ಞಾನ ಪಾಸಿಂಗ್ ಪ್ಯಾಕೇಜ ತಮಗೆ **PDF** ಫೈಲ್ ಮತ್ತು ಪುಸ್ತಕ ರೂಪದಲ್ಲಿ ನೀಡುತ್ತಿದ್ದೇನೆ ತಮ್ಮ ಅನುಭವ ಮತ್ತು ಅಭಿಪ್ರಾಯ ನನ್ನೊಂದಿಗೆ ಹಂಚಿಕೊಳ್ಳಿ

## ಸಮಾಜ ವಿಜ್ಞಾನ ಪಾಸಿಂಗ್ ಪ್ಯಾಕೇಜನ

### ವಂದನೆಗಳು




ನಿಮ್ಮೆಲ್ಲರ ಸ್ನೇಹಿತ
ಶ್ರೀ ಬಾಳೇಶ ಹತ್ತರಕಿ. ಸ.ಶಿ
ಸರಕಾರಿ ಪ್ರೌಢ ಶಾಲೆ ಹಿರನಾಗಾಂವ
ತಾ:ಬಸವಕಲ್ಯಾಣ ಜಿ:ಬೀದರ
ಮೊ ನಂ: 9972032339.
Email Id: ballappa57@gmail.com

## -:ಪ್ರೇರಣೆ:-

## 1) ಮಾನ್ಯ ಶ್ರೀ ನಾಗಣ್ಣಾ ಶಹಬಾದ
ರಾಜ್ಯ ಸಂಪನ್ಮೂಲ ಶಿಕ್ಷಕರು ಮತ್ತು ರೇಡಿಯೋ ಪಾಠ ಭೋಧಕರು

## 2)ಮಾನ್ಯ ಶ್ರೀ ಬಕ್ಕಪ್ಪಾ ಭವಾನಿಕರ
ಮು. ಗು. ಸ. ಪ್ರೌ. ಶಾಲೆ, ಹಿರನಾಗಾಂವ ತಾ:ಬಸವಕಲ್ಯಾಣ ಜಿ:ಬೀದರ

## 3)ಮಾನ್ಯ ಶ್ರೀ ಬಲಭೀಮ ಕುಲಕರ್ಣಿ
ಬೀದರ ಜಿಲ್ಲಾ ಸಂಪನ್ಮೂಲ ಶಿಕ್ಷಕರು ಸ..ಪ್ರೌ..ಶಾಲೆ ಹೆಡಗಾಪೂರ ತಾ: ಔರಾದ

## 4) ಸಂಜುಕುಮಾರ ಮಾನೂರೆ
ಬೀದರ ಜಿಲ್ಲಾ ಸಂಪನ್ಮೂಲ ಶಿಕ್ಷಕರು ಸ..ಪ್ರೌ..ಶಾಲೆ ಎಕಲಾರ ತಾ: ಔರಾದ

## 5)ಮಾನ್ಯ ಶ್ರೀ ದೇವೇಂದ್ರ ಕಾದೆಪೂರೆ
ಅಧ್ಯಕ್ಷರು ಸಮಾಜ ವಿಜ್ಞಾನ ವೇದಿಕೆ ಬಸವಕಲ್ಯಾಣ

## ತಾಂತ್ರಿಕ ಸಹಾಯ

ಶ್ರೀ ಅವಿನಾಶ ಆನಂದ ಕೋಲಾರ
ಬಸವ ಕಂಪ್ಯೂಟರ್
ಬಿ.ಡಿ.ಓ ಕಾಂಪ್ಲೇಕ್ಸ್ ಬಸವಕಲ್ಯಾಣ
ಮೊ ನಂ : 8884073716

“ಇಂದು ಮಾಡಬೇಕಾದ ಕೆಲಸವನ್ನು ನಾಳೆಗೆ ಮುಂದುಡಿದರೆ.....

ನಾಳೆಯೂ ಅದನ್ನು ಮಾಡಬೇಕಾದವರು ನೀವೇ !!!

ಅದರ ಬದಲು ಇಂದೆ ಮಾಡಿಬಿಡಿ. ಯೋಚನೆಯನ್ನು ಹೊತ್ತುಕೊಳ್ಳುವುದಿದೆಯಲ್ಲ.....

ಅದು ಬಹಳ ಭಾರ.......ಅದನ್ನು ತಕ್ಷಣ ಇಳಿಸಿಬಿಡಿ.

ನೆನಪಿರಲಿ ..... ಸಮಯ ಅಮೂಲ್ಯ.....ಸಮಯವನ್ನು ವ್ಯರ್ಥಗೊಳಿಸುವ ಪ್ರತಿಯೊಂದು ಕ್ಷಣವೂ ನಮ್ಮನ್ನು ಜ್ಞಾನದ ನಷ್ಟಕ್ಕೆ ..... ಬುದ್ದಿಯ ಕೊರತೆಗೆ..... ಹಣದ ಬಡತನಕ್ಕೆ ಕರೆದೊಯ್ಯುತ್ತದೆ..

ಕಲಿಕೆಯಲ್ಲಿ ಹಿಂದುಳಿಂದ ವಿಧ್ಯಾರ್ಥಿಗಳಾಗಿ
ವಿಶೇಷ ಪ್ಯಾಕೇಜ್

| ಬಹು ನಿರೀಕ್ಷಿತ ಪ್ರಶ್ನೋತ್ತರಗಳು | | |
|---|---|---|
| 01 | ಅಟೋಮನ್ ಟರ್ಕರು ಕಾನ್‌ಸ್ಟಾಂಟಿನೋಪಲ್ ನಗರ ಯಾವಾಗ ವಶಪಡಿಸಿಕೊಂಡರು? | 1453 |
| 02 | ಭಾರತಕ್ಕೆ ಬಂದ ಪೋರ್ಚುಗೀಸರ ಮೊಟ್ಟ ಮೊದಲ ವೈಸರಾಯ ಯಾರು | ಫ್ರಾನ್ಸಿಸ್ಕೋ ಡಿ ಆಲ್ಮೇಡ್ |
| 03 | 'ನೀಲಿ ನೀರಿನ ನೀತಿ' ಜಾರಿಗೆ ತಂದ ಪೋರ್ಚುಗೀಸರ ವೈಸರಾಯ ಯಾರು | ಫ್ರಾನ್ಸಿಸ್ಕೋ ಅಲ್ಮೇಡ್ |
| 04 | ಬಂಗಾಳದಲ್ಲಿ ದ್ವಿ ಪ್ರಭುತ್ವ ಪದ್ಧತಿ ಯಾರು ಜಾರಿಗೆ ತಂದರು. | ರಾಬರ್ಟ್ ಕ್ಲೈವ್ |
| 05 | ಈಸ್ಟ್ ಇಂಡಿಯಾ ಕಂಪನಿಗೆ ದಿವಾನಿ ಹಕ್ಕನ್ನು ಯಾರು ನೀಡಿದರು | ಎರಡನೇ ಷಾ ಅಲಂ |
| 06 | ಮೊದಲ ಆಂಗ್ಲೋ–ಮರಾಠ ಯುದ್ಧ ಯಾವ ಒಪ್ಪಂದದೊಂದಿಗೆ ಕೊನೆಗೊಂಡಿತು? | ಸಾಲ್‌ಬಾಯ್ ಒಪ್ಪಂದ |
| 07 | ಸಹಾಯಕ ಸೈನ್ಯ ಪದ್ದತಿಯನ್ನು ಯಾರು ಜಾರಿಗೆ ತಂದರು? | ಲಾರ್ಡ ವೆಲ್ಲೆಸ್ಲಿ. |
| 08 | ಎರಡನೇ ಆಂಗ್ಲೋ–ಮರಾಠ ಯುದ್ಧ ಯಾವ ಒಪ್ಪಂದದೊಂದಿಗೆ ಮುಕ್ತಾಯವಾಯಿತು? | ಬೆಸ್ಸಿನ್ ಒಪ್ಪಂದ |
| 09 | "ದತ್ತು ಮಕ್ಕಳಿಗೆ ಹಕ್ಕಿಲ್ಲ" ಎಂಬ ನೀತಿಯನ್ನು ಯಾರು ಜಾರಿಗೆ ತಂದರು? | "ಲಾರ್ಡ ಡಾಲ್ ಹೌಸಿ" |
| 10 | ಪಂಜಾಬನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿ ಕೊಂಡವರು ಯಾರು? | "ಲಾರ್ಡ ಡಾಲ್ ಹೌಸಿ" |
| 11 | ಲಾರ್ಡ ವೆಲ್ಲೆಸ್ಲಿ ತನ್ನ ಹುದ್ದೆಗೆ ರಾಜೀನಾಮೆ ನೀಡಲು ಕಾರಣವೇನು? | ಇವನ ಯುದ್ಧಪ್ರಿಯ ನೀತಿಯಿಂದ ಕಂಪನಿಗೆ ಸಾಲದ ಹೊರೆ |
| 12 | ಪಂಜಾಬಿನ ಸಿಂಹ ಎಂದು ಯಾರನ್ನು ಕರೆಯುತ್ತಾರೆ? | ರಣಜಿತ ಸಿಂಗ್ |
| 13 | ಪಂಜಾಬಿನ ಮೇಲೆ ಬ್ರಿಟಿಷರು ನೇರ ಆಳ್ವಿಕೆಯನ್ನು ಹೇರಲು ಹೊರಟಾಗ ಪ್ರತಿಭಟಿಸಿದವರು ಯಾರು ? | ಲಾಹೋರನಲ್ಲಿ –ಚಟ್ಟಾರ್ ಸಿಂಗ್ ಅಟ್ಟಾರಿವಾಲ ಮತ್ತು ಮುಲ್ತಾನಿನಲ್ಲಿ –ಮೂಲರಾಜನು |
| 14 | ಭಾರತದಲ್ಲಿ ನಾಗರೀಕ ಸೇವಾ ವ್ಯವಸ್ಥೆಯನ್ನು ಜಾರಿಗೆ ತಂದವರು ಯಾರು? | ಲಾರ್ಡ್ ಕಾರ್ನ್‌ವಾಲಿಸ್ |

| | | |
|---|---|---|
| 15 | ಹಿಂದೂಸ್ಥಾನದಲ್ಲಿರುವ ಪ್ರತಿಯೊಬ್ಬ ಮೂಲ ನಿವಾಸಿಯು ಭ್ರಷ್ಟ್ ಎಂದು ಪ್ರತಿಪಾದಿಸಿದವನು? | ಲಾರ್ಡ್ ಕಾರ್ನ್‌ವಾಲಿಸ್ |
| 16 | ದಿವಾನಿ ಅದಾಲತ್ ಎಂಬ ನಾಗರೀಕ ನ್ಯಾಯಾಲಯವನ್ನು ಸ್ಥಾಪಿಸಿದವನು ಯಾರು? | ವಾರನ್ ಹೆಸ್ಟಿಂಗ್ಸ್ |
| 17 | ಭಾರತದಲ್ಲಿ ಪ್ರಥಮತಃ ವ್ಯವಸ್ಥಿತವಾದ ಪೋಲಿಸ ವಿಭಾಗವನ್ನು ಅಸ್ತಿತ್ವಕ್ಕೆ ತಂದವರು? | ಕಾರ್ನ್‌ವಾಲೀಸ್ |
| 18 | ಸೂಪರಿಟೆಂಡೆಂಟ್ ಆಫ್ ಪೋಲಿಸ ಹುದ್ದೆಯನ್ನು ಸೃಷ್ಟಿಸಿದವನು ಯಾರು? | ಕಾರ್ನ್‌ವಾಲೀಸ್ |
| 19 | ಭಾರತದ ರೈತರು ಸಾಲದಲ್ಲೇ ಹುಟ್ಟಿ ಸಾಲದಲ್ಲೇ ಬದುಕಿ ಸಾಲದಲ್ಲೇ ಸತ್ತರು ಎಂದು ಹೇಳಿದವರು? | ಚಾರ್ಲ್ಸ್ ಮೆಟಕಾಫ್ |
| 20 | ಮೊದಲ ಆಂಗ್ಲೋ ಮೈಸೂರು ಯುದ್ಧ ಯಾವ ಒಪ್ಪಂದದೊಂದಿಗೆ ಮುಕ್ತಾಯವಾಯಿತು? | ಮದ್ರಾಸ್ ಒಪ್ಪಂದ |
| 21 | ಎರಡನೇ ಆಂಗ್ಲೋ ಮೈಸೂರ ಯುದ್ಧ ಯಾವ ಒಪ್ಪಂದದೊಂದಿಗೆ ಮುಕ್ತಾಯವಾಯಿತು? | ಮಂಗಳೂರ ಒಪ್ಪಂದ |
| 22 | ಮೂರನೇ ಆಂಗ್ಲೋ ಮೈಸೂರ ಯುದ್ಧ ಯಾವ ಒಪ್ಪಂದದೊಂದಿಗೆ ಮುಕ್ತಾಯವಾಯಿತು? | ಶ್ರೀರಂಗಪಟ್ಟಣ ಒಪ್ಪಂದ |
| 23 | ಸುರಪುರದ ಬಂಡಾಯ ನಾಯಕ ಯಾರು? | ವೆಂಕಟಪ್ಪ ನಾಯಕ |
| 24 | ನಿರುದ್ಯೋಗ ಎಂದರೇನು? | ಉದ್ಯೋಗ ಸಿಗದಿರುವ ಪರಿಸ್ಥಿತಿಯನ್ನು ನಿರುದ್ಯೋಗ ಎನ್ನವರು. |
| 25 | ಭಾರತದಲ್ಲಿ 2011ರ ಜನಗಣತಿಯ ಪ್ರಕಾರ ಬಡತನದ ದರ ಎಷ್ಟು? | ಶೇಕಡಾ 21.9 |
| 26 | ಕರ್ನಾಟಕದಲ್ಲಿನ ಹಿಂದುಳಿದ ಪ್ರದೇಶಗಳಿಗೆ ವಿಶೇಷ ಸ್ಥಾನಮಾನವನ್ನು ನೀಡಿದ ವಿಧಿ ಯಾವುದು? | 371(ಜೆ) |
| 27 | ಸ್ತ್ರೀ ಶಕ್ತಿ' ಕಾರ್ಯಕ್ರಮದ ಉದ್ದೇಶವೇನು? | ಗ್ರಾಮಾಂತರ ಮಹಿಳೆಯರ ವಿಕಾಸ |

| | | |
|---|---|---|
| | | |
| 28 | ಯಾವುದನ್ನು ಬಲಪ್ರಯೋಗದ ಒತ್ತಡ ತಂತ್ರಗಾರಿಕೆ ಎಂದು ಕರೆಯಲಾಗಿದೆ? | ಭಯೋತ್ಪಾದಕತೆ |
| 29 | ಭಾರತದ ವಿದೇಶಾಂಗ ನೀತಿಯ ರೂವಾರಿ ಯಾರು? | ಜವಾಹರ್ ಲಾಲ್ ನೆಹರು |
| 30 | "ಅಲಿಪ್ತ ನೀತಿ" ಎಂದರೇನು? | ವಿಶ್ವದ ಯಾವುದೇ ಬಣಕ್ಕೂ ಸೇರದೆ ಇರುವ ನೀತಿಯನ್ನು ಅಲಿಪ್ತ ನೀತಿಯನ್ನುಎನ್ನುವರು |
| 31 | ಆಫ್ರಿಕಾಗಾಂಧಿ ಎಂದು ಪ್ರಸಿದ್ಧರಾದವರು ಯಾರು? | ನೆಲ್ಸನ್ ಮಂಡೇಲಾ |
| 32 | 1966ರ ತಾಷ್ಕೆಂಟಿನಲ್ಲಿ ಭಾರತ–ಪಾಕಿಸ್ತಾನಗಳ ಮಧ್ಯೆ ಒಪ್ಪಂದಕ್ಕೆ ಯಾವ ದೇಶ ಸಹಕರಿಸಿತು? | ರಷ್ಯಾ |
| 33 | ಭಾರತದ ಭಿಲ್ಯಾ ಹಾಗೂ ಭೋಕಾರೋ ಉಕ್ಕಿನ ಕಾರ್ಖಾನೆಗಳಿಗೆ ಸಹಕರಿಸಿದ ದೇಶ ಯಾವುದು? | ಸೋವಿಯತ್ ರಷ್ಯಾ |
| 34 | ಅಸ್ಪೃಶ್ಯತಾ ಅಪರಾದ ಕಾಯ್ದೆ ಯಾವಾಗ ಜಾರಿಗೆ ಬಂತು? | 1955 |
| 35 | 'ಶಿಕ್ಷಣ ಸಾರ್ವಜನಿಕ ಸ್ವತ್ತಾಗಬೇಕು' ಎಂದು ಪ್ರತಿಪಾದಿಸಿದವರು ಯಾರು? | ಡಾ.ಬಿ. ಆರ್ ಅಂಬೇಡ್ಕರ್ |
| 36 | "ಅಸ್ಪೃಶ್ಯತೆ ಹಿಂದೂ ಸಮಾಜವನ್ನು ಕುಷ್ಟರೋಗದ ಹುಣ್ಣಿನಂತೆ ವೇದಿಸುತ್ತದೆ" ಎಂದು ಹೇಳಿದವರು ಯಾರು? | ಮಹಾತ್ಮಾ ಗಾಂಧೀಜಿ |
| 37 | ಭಾರತದ ಒಟ್ಟು ವಿಸ್ತೀರ್ಣ ಎಷ್ಟು? | 32,87,263 ಚದರ ಕಿ.ಮೀ. |
| 38 | ಪ್ರಪಂಚದಲ್ಲೇ ಅತಿ ಎತ್ತರವಾದ ಶಿಖರ ಯಾವುದು? | ಮೌಂಟ್ ಎವರೆಸ್ಟ್ |
| 39 | ಭಾರತದ ಅತಿ ಎತ್ತರವಾದ ಶಿಖರ ಯಾವುದು? | $K_2$ಅಥವಾ ಗಾಡ್ವಿನ್ ಆಸ್ಟಿನ್ |
| 40 | ದಕ್ಷಿಣ ಭಾರತದ ಅತಿ ಎತ್ತರವಾದ ಶಿಖರ ಯಾವುದು? | " ಅಣ್ಣೈಮುಡಿ" |
| 41 | ಅರಾವಳಿ ಸರಣಿಯ ಎತ್ತರದ ಪರ್ವತ ಯಾವುದು? | "ಗುರುಶಿಖರ" |
| 42 | ಪೂರ್ವಘಟ್ಟಗಳು ಮತ್ತು ಪಶ್ಚಿಮ ಘಟ್ಟಗಳು ಎಲ್ಲಿ ಸಂಧಿಸುತ್ತವೆ? | ನೀಲಗಿರಿ ಬೆಟ್ಟ |
| | | |

| | | |
|---|---|---|
| 43 | ಪೂರ್ವ ಘಟ್ಟಗಳಲ್ಲಿ ಅತಿ ಎತ್ತರವಾದ ಶಿಖರ ಯಾವುದು? | ಅರ್ಮಕೊಂಡ |
| 44 | ಭಾರತದಲ್ಲಿ ಕಡಿಮೆ ಮಳೆಯಾಗುವ ಋತುಮಾನ ಯಾವುದು? | ಚಳಿಗಾಲ |
| 45 | ಭಾರತದಲ್ಲಿ ಅತಿ ಕಡಿಮೆ ಉಷ್ಣಾಂಶವು ಎಲ್ಲಿ ದಾಖಲಾಗುತ್ತದೆ? | ಕಾರ್ಗಿಲ್ ಸಮೀಪದಲ್ಲಿರುವ ಡ್ರಾಸ್ ($-4^\circ$ ಸೆ) |
| 46 | ಭಾರತದಲ್ಲಿ ಅತಿ ಹೆಚ್ಚು ಉಷ್ಣಾಂಶ ದಾಖಲಾಗಿರುವ ಪ್ರದೇಶ ಯಾವುದು? | ಗಂಗಾ ನಗರ |
| 47 | ಪಶ್ಚಿಮ ಬಂಗಾಳದಲ್ಲಿ ಪರಿಸರಣ ಮಳೆಯನ್ನು ಏನೆಂದು ಕರೆಯುವರು? | “ಕಾಲಬೈಸಾಕಿ” |
| 48 | ಭಾರತದಲ್ಲಿ ಅತಿ ಕಡಿಮೆ ಮಳೆಯಾಗುವ ಪ್ರದೇಶ ಯಾವುದು? | ರಾಜಸ್ತಾನದ ರೊಯ್ಲಿ |
| 49 | ಭಾರತದಲ್ಲಿ ಅತಿ ಹೆಚ್ಚು ಮಳೆಯಾಗುವ ಪ್ರದೇಶ ಯಾವುದು? | ಮಾಸಿನ್ ರಾಮ್ |
| 50 | ಕಪ್ಪು ಮಣ್ಣನ್ನು ಯಾವ ಹೆಸರಿನಿಂದ ಕರೆಯುತ್ತಾರೆ? | “ರೀಗರ್ ಮಣ್ಣು” ಮತ್ತು “ಕಪ್ಪು ಹತ್ತಿ ಮಣ್ಣು” |
| 51 | ಒಂದು ದೇಶದಲ್ಲಿ ಒಂದು ವರ್ಷದಲ್ಲಿ ಉತ್ಪಾದನೆಯಾಗುವ ಎಲ್ಲಾ ಸರಕು ಸೇವೆಗಳ ಒಟ್ಟು ಮಾರುಕಟ್ಟೆ ಮೌಲ್ಯವೇ | ರಾಷ್ಟ್ರೀಯ ಆದಾಯ |
| 52 | ಒಂದು ದೇಶದಲ್ಲಿನ ಪ್ರತಿಯೊಬ್ಬ ವ್ಯಕ್ತಿಯ ಸರಾಸರಿ ಆದಾಯವೇ | ತಲಾ ವರಮಾನ |
| 53 | 2011 ರಲ್ಲಿ ಭಾರತದಲ್ಲಿ ಲಿಂಗಾನುಪಾವು ಎಷ್ಟು ಇತ್ತು.? | 945 |
| 54 | ಮಹಿಳೆಯರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜೀಕಿಯವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ ಸಬಲರನ್ನಾಗಿ ಮಾಡುವುದೇ | ಮಹಿಳಾ ಸಬಲೀಕರಣ. |
| 55 | ‘ಭಾರತದ ನೈಜ ಅಭಿವೃದ್ಧಿಯೆಂದರೆ, ಗ್ರಾಮಗಳ ಅಭಿವೃದ್ಧಿ ಎಂದವರು | ಮಹತ್ಮಾ ಗಾಂಧೀಜಿ |
| 56 | ಬ್ಯಾಂಕುಗಳ ಬ್ಯಾಂಕು ಯಾವುದು | ರಿಸರ್ವ ಬ್ಯಾಂಕ |

| | | |
|---|---|---|
| 57 | ದಿನಕ್ಕೆ ಎಷ್ಟು ಭಾರಿಯಾದರು ವ್ಯವಹರಿಸಬಹುದಾದ ಖಾತೆ ಯಾವುದು | ಚಾಲ್ತಿ ಖಾತೆ |
| 58 | ಜಿಲ್ಲಾ ಕೈಗಾರಿಕಾ ಕೇಂದ್ರ ಏಕೆ ಸ್ಥಾಪಿಸಲಾಗಿದೆ? | ಗ್ರಾಮಾಂತರ ಕೈಗಾರಿಕೆ ಅಭಿವೃದ್ಧಿ ಪಡಿಸಲು |
| 59 | ವಿಶ್ವ  ಗ್ರಾಹಕರ ದಿನವನ್ನು ಪ್ರತಿ ವರ್ಷ ಯಾವ ದಿನದಂದು ಆಚರಿಸುತ್ತಾರೆ ? | ಮಾರ್ಚ್ 15 |
| 60 | ಗ್ರಾಹಕ ಸಂರಕ್ಷಣಾ ಕಾಯ್ದೆ ಯಾವಾಗ ಜಾರಿಗೆ ಬಂತು ? | 1986 |
| 61 | ರಷ್ಯಾದ ಜನರಿಗೆ "ಶಾಂತಿ, ಆಹಾರ,ಭೂಮಿ" ಎಂಬ ಜನಪ್ರೀಯ ಘೋಷಣೆ ನೀಡಿದವರು ಯಾರು? | ಲೆನಿನ್ |
| 62 | ರಷ್ಯಾದಲ್ಲಿ ಪಂಚವಾಷಿಕ ಯೋಜನೆಗಳನನು ಜಾರಿಗೆ ತಂದವರು ಯಾರು ? | ಜೋಸೆಫ್ ಸ್ಟಾಲೀನ್ |
| 63 | ಗ್ಲಾಸ್ಟನೊಸ್ತ್ ಮತ್ತು ಪೆರಿಸ್ಟ್ರೋಯಿಲ್ ಸುಧಾರಣೆಗಳನ್ನು ರಷ್ಯಾದಲ್ಲಿ ಯಾರು ಜಾರಿಗೆ ತಂದರು? | ಮಿಖಾಯಿಲ್ ಗೋರ್ಬಚೇವ್ |
| 64 | 'ಬೂದು ಅಂಗಿದಳ' ಸೈನ್ಯ ಯಾರು ಸ್ಥಾಪಿಸಿದರು ? | ಹಿಟ್ಲರ್ |
| 65 | ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ್ನು ಯಾವಾಗ ಸ್ಥಾಪಿಸಲಾಯಿತು? | 1885 |
| 66 | ಭಾರತದ ಹೆಬ್ಬಾಗಿಲು ಎಂದು ಯಾವ ಬಂದರನ್ನು ಕರೆಯುತ್ತಾರೆ? | ಮುಂಬೈ |
| 67 | ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ಯಾವ ಇಲಾಖೆ ನೀಡುತ್ತದೆ? | ಅಂಚೆ ಇಲಾಖೆ |
| 68 | ಯಾವ ಲೋಹವನ್ನು 'ಮಿಶ್ರಲೋಹ' ಎನ್ನುವರು? | ಮ್ಯಾಂಗನೀಸ್ |
| | | |

| | | |
|---|---|---|
| 69 | ಸಸ್ಯಾವಶೇಷ ಇಂಧನ ಎಂದು ಯಾವುದನ್ನು ಕರೆಯುವರು? | ಕಲ್ಲಿದ್ದಲು |
| 70 | 'ಗೋವಿಂದ ಸಾಗರ' ಎಂದು ಯಾವ ಆಣೆಕಟ್ಟನ್ನು ಕರೆಯುವರು? | ಭಾಕ್ರಾನಂಗಲ |
| 71 | ಪಂಪ ಸಾಗರ' ಎಂದು ಯಾವ ಅಣೆಕಟ್ಟನ್ನು ಕರೆಯುವರು? | ತುಂಗಭದ್ರ ಜಲಾಶಯ |
| 72 | ಭಾರತದ ಅತಿ ಎತ್ತರವಾದ ಅಣೆಕಟ್ಟು ಯಾವುದು? | ಭಾಕ್ರಾನಂಗಲ |
| 73 | ಭಾರತದ ಅತಿ ಉದ್ದವಾದ ಅಣೆಕಟ್ಟು ಯಾವುದು? | ಹಿರಾಕುಡ್ |
| 74 | ಪಶ್ಚಿಮ ಬಂಗಾಳದ ಕಣ್ಣೀರು ನದಿ ಯಾವುದು? | ದಾಮೋದರ ನದಿ |
| 75 | ಓರಿಸ್ಸಾದ ಕಣ್ಣೀರು ನದಿ ಯಾವುದು? | ಮಹಾನದಿ |
| 76 | ವಿಶ್ವಸಂಸ್ಥೆಯನ್ನು ಯಾವಾಗ ಸ್ಥಾಪಿಸಲಾಯಿತು? | 1945 ಅಕ್ಟೋಬರ್ 24 |
| 77 | ವಿಶ್ವ ಸಂಸ್ಥೆಯ ಮುಖ್ಯ ಕಛೇರಿ ಎಲ್ಲಿದೆ? | ನ್ಯೂಯಾರ್ಕ ನಗರ |
| 78 | ವಿಶ್ವ ಸಂಸ್ಥೆಯ 'ಸಚಿವ ಸಂಪುಟ' ಎಂದು ಯಾವ ಅಂಗ ಸಂಸ್ಥೆ ಕರೆಯುವರು? | ಭದ್ರತಾಸಮಿತಿ |
| 79 | ಅಂತರರಾಷ್ಟ್ರೀಯ ನ್ಯಾಯಾಲಯದ ಕೇಂದ್ರ ಕಛೇರಿ ಎಲ್ಲಿದೆ? | ಹೇಗ್ ನಗರ |
| 80 | ವಿಶ್ವ ಸಂಸ್ಥೆಯ ಈಗಿನ ಪ್ರಧಾನ ಕಾರ್ಯದರ್ಶಿ ಯಾರು? | ಅಂಟೋನಿಯೊ ಗುಟಾರೆಸ್ |
| 81 | ಸಾರ್ಕ್ ಸ್ಥಾಪನೆಯಾದ ವರ್ಷ ಯಾವುದು? | 1985 |
| 82 | ಮಾನವ ಹಕ್ಕುಗಳ ದಿನವನ್ನು ಯಾವ ದಿನದಂದು ಆಚರಿಸುತ್ತಾರೆ? | ಡಿಸೆಂಬರ್ 10 |

| | | |
|---|---|---|
| 83 | ಸಾರ್ಕ್‌ನ ಕೇಂದ್ರ ಕಛೇರಿ ಎಲ್ಲಿದೆ? | ನೇಪಾಳದ ಕ್ಠ್ಮಂಡು |
| 84 | ಕಂಪನಿಯ ಕೊನೆಯ ಗವರ್ನರ್ ಜನರಲ್ ಯಾರು? | ಲಾರ್ಡ ಮೌಂಟ್ ಬ್ಯಾಟನ್ |
| 85 | ಭಾರತದ ಪ್ರಥಮ ಗೃಹ ಮಂತ್ರಿ ಯಾರು? | ವಲ್ಲಭಬಾಯಿ ಪಟೇಲ್ |
| 86 | ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರು ಯಾರು ? | ಡಾ. ಬಾಬು ರಾಜೇಂದ್ರ ಪ್ರಸಾದ್ |
| 87 | ಗೋವಾ ವಿಮೋಚನೆಯಾದ ವರ್ಷ ಯಾವುದು ? | 1961 |
| 88 | ರಾಜ್ಯ ಪುನರ್ವಿಂಗಡಣಾ ಕಾನೂನು ಯಾವಾಗ ಜಾರಿಗೆ ಬಂತು? | 1956 |
| 89 | ಪಾಂಡಿಚೇರಿಯು ಭಾರತದ ಕೇಂದ್ರಾಡಳಿತ ಪ್ರದೇಶವಾಗಿ ಯಾವಾಗ ಜಾರಿಗೆ ಬಂದಿತು? | 1963 |
| 90 | ಸಿಖ್ಖರ ಸೋಲಿಗೆ ಕಾರಣವಾದ ಅವಮಾನಕರ ಒಪ್ಪಂದ ಯಾವುದು? | ಲಾಹೋರ್ ಒಪ್ಪಂದ |
| 91 | ಮಹಲ್ವಾರಿ ಪದ್ಧತಿಯನ್ನು ಜಾರಿಗೆ ತಂದವರು? | ಆರ್ ಎಂ. ಬರ್ಡ ಮತ್ತು ಜೇಮ್ಸ್ |
| 92 | ಅಲ್‌ಕ್ಸಾಂಡರ್ ರೀಡ್ ಜಾರಿಗೆ ತಂದ ಕಂದಾಯ ಪದ್ಧತಿ? | ರೈತವಾರಿ ಪದ್ಧತಿ |
| 93 | ಅಮರ ಸುಳ್ಯದ ಬಂಡಾಯದ ಕೇಂದ್ರ ಸ್ಥಾನಗಳು ಯಾವುವು? | ಸುಳ್ಯ, ಬೆಳ್ಳಾರೆ, ಪುತ್ತೂರು. |
| 94 | ಬ್ರಹ್ಮ ಸಮಾಜವನ್ನು ಯಾರು ಸ್ಥಾಪಿಸಿದರು? | ರಾಜಾರಾಮ ಮೋಹನ್‌ರಾಯ |
| 95 | 1971ರ ಭಾರತ–ಪಾಕಿಸ್ತಾನ ಯುದ್ಧದ ಪರಿಣಾಮವೇನು? | ಬಾಂಗ್ಲಾದೇಶದ ಉದಯ |

| | | |
|---|---|---|
| 96 | 1961ರ ಗೋವಾ ವಿಮೋಚನೆಗೆ ನೆರವು ನೀಡಿದ ದೇಶ ಯಾವುದು? | ರಷ್ಯಾ |
| 97 | 'ಅಪೊಲೋ' ಆಸ್ಪತ್ರೆಗಳನ್ನು ಪ್ರಾರಂಭಿಸಿದವರು ಯಾರು? | ಡಾ. ಪ್ರತಾಪ್ ರಡ್ಡಿ |
| 98 | ಬಿಳಿಕಾಂತ್ರಿಯು ಪಿತಮಾಹ ಎಂದು ಯಾರನ್ನು ಕರೆಯಲಾಗಿದೆ? | ವರ್ಗೀಸ್ ಕುರಿಯನ್ |
| 99 | ರಿಲಾಯನ್ಸ್" ನ ಸ್ಥಾಪಕರು ಯಾರು? | ಧೀರೂಬಾಯಿ ಅಂಬಾನಿ |
| 100 | ವಿಪ್ರೋ ತಂತ್ರಜ್ಞಾನ ಸಂಸ್ಥೆಯ ಅಧ್ಯಕ್ಷರು ಯಾರು? | ಅಜೀಂ ಪ್ರೇಮ್‌ಜಿ |
| 101 | ಬಯೋಕಾನ್ ನಿಗಮದ ಸ್ಥಾಪಕರು ಯಾರು? | ಕಿರಣ್ ಮುಜುಮ್‌ದಾರ್ ಷಾ |
| 102 | ಇಂದಿರಾ ಕೋಲ್ ಎಲ್ಲಿದೆ? | ಜಮ್ಮು –ಕಾಶ್ಮೀರ |
| 103 | ಭಾರತೀಯ ಆದರ್ಶ ಕಾಲಮಾನ ರೇಖೆ ಯಾವುದು? | 82 1/2° ಪೂರ್ವ ರೇಖಾಂಶ |
| 104 | ಭಾರತದ ಮಧ್ಯ ಭಾಗದಲ್ಲಿ ಹಾದು ಹೋದ ಅಕ್ಷಾಂಶ ಯಾವುದು? | 23 1/2° ಉತ್ತರ ಅಕ್ಷಾಂಶ |
| 105 | ಭಾರತದಲ್ಲಿ ಇತ್ತೀಚಿಗೆ ರಚನೆಯಾದ ಹೊಸ ರಾಜ್ಯ ಯಾವುದು? | ತೆಲಂಗಾಣ |
| 106 | ಹಿಮಾಲಯದ ಪಾದಬೆಟ್ಟಗಳನ್ನು ಯಾವ ಹೆಸರಿನಿಂದ ಕರೆಯುತ್ತಾರೆ? | ಶಿವಾಲಿಕ್ ಶ್ರೇಣಿಗಳು |
| 107 | ಪಶ್ಚಿಮ ಘಟ್ಟಗಳಿಗಿರುವ ಮತ್ತೊಂದು ಹೆಸರೇನು? | "ಸಹ್ಯಾದ್ರಿ ಸರಣಿ" |
| 108 | ಲಕ್ಷದ್ವೀಪಗಳನ್ನು ಯಾವ ಹೆಸರನಿಂದ ಕರೆಯುತ್ತಾರೆ? | ಹವಳದ ದ್ವೀಪ |

# ಕಲಿಕೆಯಲ್ಲಿ ಹಿಂದುಳಿಂದ ವಿಧ್ಯಾರ್ಥಿಗಳಾಗಿ
# ವಿಶೇಷ ಪ್ಯಾಕೇಜ್

| ಬ್ಯಾಂಕಿನ ಕಾರ್ಯಗಳು / ಸೇವೆಗಳು/ ಲಕ್ಷಣಗಳು/ಅನುಕೂಲಗಳು |
|---|
| 1. ಠೇವಣಿಗಳನ್ನು ಅಂಗೀಕರಿಸುತ್ತದೆ<br>2. ಸಾಲ ನೀಡುತ್ತದೆ<br>3. ಹಣದ ಭದ್ರತೆ ಕಾಪಾಡುತ್ತದೆ<br>4. ಭದ್ರತಾ ಕಪಾಟುಗಳನ್ನು ಒದಗಿಸುತ್ತದೆ<br>5. ಹಣದ ವರ್ಗಾವಣೆ<br>6. ಹುಂಡಿಗಳನ್ನು ಸೋಡಿ ಮಾಡುವುದು<br>7. ಜಮಾ ಕಾರ್ಡ ವಿತರಿಸುವುದು |

| ಉಳಿತಾಯ ಖಾತೆ ಮತ್ತು ಚಾಲ್ತಿ ಖಾತೆ ನಡುವಿನ ವ್ಯತ್ಯಾಸ | |
|---|---|
| ಉಳಿತಾಯ ಖಾತೆ | ಚಾಲ್ತಿ ಖಾತೆ |
| 1. ವೇತನ ಪಡೆಯುವವರು ಮತ್ತು ಸಣ್ಣ ಉಳಿತಾಯಗಾರರಿಗೆ ಸೂಕ್ತ<br>2. ಈ ಖಾತೆಯ ಠೇವಣಿಗಳಿಗೆ ಬ್ಯಾಂಕ್‌ಗಳು ಬಡ್ಡಿಯನ್ನು ಕೊಡುತ್ತವೆ.<br>3. ದಿನಕ್ಕೆ ಎಷ್ಟು ಬಾರಿಯಾದರು ವ್ಯವಹರಿಸಲು ಬರುವುದಿಲ್ಲ | 1. ವ್ಯಾಪಾರಸ್ಥರು ವಾಣಿಜ್ಯ ವ್ಯವಹಾರ ನಡೆಸುವವರಿಗೆ ಸೂಕ್ತ<br>2. ಈ ಖಾತೆಯ ಠೇವಣಿಗಳಿಗೆ ಬ್ಯಾಂಕಗಳು ಬಡ್ಡಿಯನ್ನು ಕೊಡುವುದಿಲ್ಲ,<br>3. ದಿನಕ್ಕ ಎಷ್ಟು ಬಾರಿ ವ್ಯವಹಿಸಬಹುದು. |

| ಬ್ಯಾಂಕಿನಲ್ಲಿ ಖಾತೆ ತೆಗೆಯುವ ವಿಧಾನಗಳು |
|---|
| 1. ಯಾವ ವಿಧವಾದ ಬ್ಯಾಂಕ್ ಕಾತೆಯನ್ನು ತೆಗಡಯಬೇಕೆಂಬುದನನು ನಿರ್ದರಿಸುವುದು.<br>2. ನಿಮಗೆ ಅನುಕೂಲವಾದ ಬ್ಯಾಂಕಿಗೆ ತೆರಳಿ ಅಧಿಕಾರಿಯನನು ಸಂಪರ್ಕಿಸುವುದು.<br>3. ಪ್ರಸ್ತಾವನೆ ಅರ್ಜಿ ನಮೂನೆಯನ್ನು ತುಂಬುವುದು.<br>4. ಪರಿಚಿತರ ಉಲ್ಲೇಖವನ್ನು ಕೊಡುವುದು.<br>5. ಬ್ಯಾಂಕ್ ಖಾಅತೆಯನ್ನು ತೆಗೆಯುವ ನಮೂನೆಯನ್ನು ಬ್ಯಾಂಕಿಗೆ ಒಪ್ಪಿಸುವುದು.<br>6. ಪ್ರಾರಂಭಿಕ ಠೇವಣಿ –ಇಡುವುದು. |

| ಅಂಚೆ ಕಛೇರಿಗಳು ಸಲ್ಲಿಸುವ ಸೇವೆಗಳು | |
|---|---|
| 1. ರಾಷ್ಟ್ರೀಯ ಉಳಿತಾಯ ಪತ್ರಗಳನ್ನುನೀಡುತ್ತದೆ.<br>2. ಕಿಸಾನ್ ವಿಕಾಸ್ ಪತ್ರಗಳನ್ನು ನೀಡುತ್ತದೆ<br>3. ಮಾಸಿಕ ಆವರ್ತ ಠೇವಣಿ ಖಾತೆಗಳನ್ನು ಒದಗಿಸುತ್ತವೆ.<br>4. ಅಂಚೆ ಉಳಿತಾಯ ಖಾತೆಗಳನ್ನು ನಿರ್ವಹಿಸುತ್ತವೆ<br>5. ವಿವಿಧ ನಿವೃತ್ತಿ ವೇತನಗಳನ್ನು ಪಾವತಿ ಮಾಡುವುದು. | 6. ಹಣ ವರ್ಗಾವಣೆಯನ್ನು ಮಾಡುತ್ತದೆ.<br>7. ಅಂಚೆ ಜೀವ ವಿಮೆ ಸೇವೆಗಳನ್ನು ನೀಡುತ್ತದೆ. |

| ವಿದೇಶಾಂಗ ನೀತಿಯ ಗುರಿ ಮತ್ತು ಉದ್ದೇಶಗಳು |
|---|
| 1. ರಾಷ್ಟ್ರದ ಭದ್ರತೆ<br>2. ರಾಷ್ಟ್ರದ ಆರ್ಥಿಕ ಸಂವರ್ಧನೆ<br>3. ಸಾಂಸ್ಕೃತಿಕ ಮೌಲ್ಯಗಳ ಪ್ರಸಾರ<br>4. ಮಿತ್ರರಾಷ್ಟ್ರಗಳನ್ನು ಹೆಚ್ಚಿಸಿಕೊಂಡು ಶತ್ರುರಾಷ್ಟ್ರಗಳ ನಿರ್ಬಂಧ<br>5. ವಿಶ್ವಶಾಂತಿ ಮತ್ತು ಸಹಬಾಳ್ವೆ ಸಾಧಿಸುವುದು. |
| ಭಾರತದ ವಿದೇಶಾಂಗ ನೀತಿಯ ಮೂಲಭೂತ ಅಂಶಗಳು/ಲಕ್ಷಣಗಳು |
| 1. ಪಂಚಶೀಲ ತತ್ವಗಳು<br>2. ವಸಾಹತುಶಾಹಿಗೆ ವಿರೋಧ<br>3. ವರ್ಣಭೇದ ನೀತಿಗೆ ಭೋಧ<br>4. ಅಲಿಪ್ತ ನೀತಿ<br>5. ನಿಶಸ್ತ್ರೀಕರಣ |
| ಪಂಚಶೀಲ ತತ್ವಗಳು |
| 1.ಪರಸ್ಪರ ರಾಷ್ಟ್ರಗಳ ಪ್ರಾದೇಶಿಕ ಹಾಗೂ ಸಾರ್ವಭೌಮತೆಗೆ ಗೌರವ<br>2. ಪರಸ್ಪರ ಆಕ್ರಮಣ ಮಾಡದಿರುವುದು.<br>3. ಆಂತರಿಕ ವ್ಯವಹಾರಗಳಲ್ಲಿ ಪರಸ್ಪರ ಹಸ್ತಕ್ಷೇಪ ಮಾಡದಿರುವುದು.<br>4.ಪರಸ್ಪರ ಸಹಾಕಾರ ಮತ್ತು ಸಮಾನತೆ<br>5.ಶಾಂತಿಯುತ ಸಹಬಾಳ್ವೆ |

| ಪ್ರಚಲಿತ ಜಗತ್ತಿಗೆ ನಿಶಸ್ತ್ರೀಕರಣ ಅತೀ ಅಗತ್ಯ ಎಂದು ಭಾರತ ಏಕೆ ಪ್ರತಿಪಾದಿಸುತ್ತಿದೆ? | | |
|---|---|---|
| 1. ಇದು ಶಸ್ತ್ರಾಸ್ತ್ರ ಪೈಪೋಟಿಯನ್ನು ತಗ್ಗಿಸುತ್ತದೆ<br>2. ಯುದ್ಧದ ಸಂಭವನೀಯತರಯು ಕುಗುತ್ತದೆ.<br>3. ವಿಶ್ವಶಾಂತಿ ನೆಲೆಸುತ್ತದೆ.<br>4. ಮೂರನೇ ಮಹಾಯುದ್ಧದ ಭೀತಿಯನ್ನು ದೂರಮಾಡಲು ಅಗತ್ಯ<br>5. ಅಣ್ವಸ್ತ್ರಗಳ ಬಳಕೆಯ ಭೀತಿಯನ್ನು ಹೊಗಲಾಡಿಸಲು ಸಹಾಯಕ | | |
| ಮಣ್ಣಿನ ಸವೆತಕ್ಕೆ ಕಾರಣಗಳು | ಮಣ್ಣಿನ ಸವೆತದ ಪರಿಣಾಮಗಳು | ಮಣ್ಣಿನ ಸವೆತ ತಡೆಯುವ ವಿಧಾನ |
| 1. ಅರಣ್ಯ ನಾಶ<br>2. ಅವೈಜ್ಞಾನಿಕ ಬೇಸಾಯ<br>3. ಸಾಕು ಪ್ರಾಣಿಗಳನ್ನು ಮೇಯಿಸುವುದು<br>4. ವರ್ಗಾವಣೆ ಬೇಸಾಯ<br>5. ಇಟ್ಟಿಗೆ, ಟೈಲ್ಸ, ಮತ್ತು ಮಡಿಕೆಗಳ ನಿರ್ಮಾಣ | 1. ನದಿಗಳಲ್ಲಿ ಪ್ರವಾಹ ಉಂಟಾಗುತ್ತದೆ.<br>2. ನದಿಗಳಲ್ಲಿ ಹೂಳು ತುಂಬುತ್ತದೆ.<br>3.ಜಲಾಶಯಗಳಲ್ಲಿ ನೀರಿನ ಸಂಗ್ರಹಣಾ ಸಾಮರ್ಥ್ಯ ಕಡಿಮೆಯಾಗುತ್ತದೆ.<br>4. ನೀರಿನ ಕಡಿಮೆ ಇಂಗುವಿಕೆ | 1. ಮೆಟ್ಟಿಲು ಪಂಕ್ತಿ ಬೇಸಾಯ<br>2 ಚೆಕ್ ಡ್ಯಾಮಗಳ ನಿರ್ಮಾಣ<br>3. ಅರಣ್ಯ ರಕ್ಷಣೆ<br>4. ಬದುಗಳ ನಿರ್ಮಾಣ<br>5. ಸಮೋನ್ನತಿ ಕೃಷಿ<br>6. ನೀರಿನ ಯೋಜಿತ ಬಳಕೆ |

| ಅಸ್ಪೃಶ್ಯತೆಯ ನಿವಾರಣೆಗೆ ಕೈಗೊಂಡ ಕ್ರಮಗಳು |
|---|
| 1. 17ನೇ ವಿಧಿಯಂತೆ ಅಸ್ಪೃಶ್ಯತೆಯ ನಿವಾರಣೆ<br>2. 1955 ರಲ್ಲಿ ಅಸ್ಪೃಶ್ಯತಾ ಅಪರಾಧ ಕಾಯ್ದೆ<br>3. 1976 ರಲ್ಲಿ ನಾಗರೀಕ ಹಕ್ಕುಗಳ ಸಂರಕ್ಷಣಾ ಕಾಯ್ದೆ<br>4. ಸಮಾನತೆ ಹಕ್ಕನ್ನು ಜಾರಿ ತಂದಿರುವುದು.<br>5. ರಾಜಕೀಯ, ಆರ್ಥಿಕ, ಶೈಕ್ಷಣಿಕ, ಉದ್ಯೋಗ, ಕ್ಷೇತ್ರದಲ್ಲಿ ಮೀಸಲಾತಿ ಕಲ್ಪಿಸಲಾಗಿದೆ.<br>6. 1989 ರ ಶಾಸನವು ಅಸ್ಪೃಶ್ಯತೆ ನಿರ್ಮೂಲನೆಯ ಜವಾಬ್ದಾರಿ ರಾಜ್ಯ ಸರ್ಕಾರಗಳಿಗೆ ನೀಡಿದೆ. |
| ಅಸ್ಪೃಶ್ಯತೆ ಒಂದು ಸಾಮಾಜಿಕ ಪಿಡಗು ಚರ್ಚಿಸಿರಿ |
| 1. ಅಸ್ಪೃಶ್ಯತೆ ಸಾಮಾಜಿಕವಾಗಿ ಅತ್ಯಂತ ಕೆಳಹಂತಹದ ಆಚರಣೆಯಾಗಿದೆ.<br>2. ಶಿಕ್ಷಣದಿಂದ ಅಸ್ಪೃಶ್ಯರನ್ನು ವಂಚಿಸಲಾಗಿದೆ.<br>3. ಆಸ್ತಿಯ ಹಕ್ಕನ್ನು ನಿರಾಕರಣೆ ಮಾಡಲಾಗಿದೆ.<br>4. ರಾಜಕೀಯದಲ್ಲಿ ಭಾಗವಹಿಸುವಿಕೆಯನ್ನು ಇವರಿಗೆ ನಿರಾಕರಿಸಲಾಗಿದೆ.<br>5. ಇದು ಮಾನವ ಹಕ್ಕುಗಳ ನಿರಾಕರಣೆ ಮಾಡುತ್ತದೆ.<br>6. ಇದು ದುರ್ಬಲರನ್ನು ಶೋಷಿಸುತ್ತದೆ. |

| ಸಾಮಾಜಿಕ ಸ್ತರವಿನ್ಯಾಸದ ಲಕ್ಷಣಗಳು | ಸಾಮಾಜಿಕ ಅಸಮಾನತೆಗೆ ಕಾರಣಗಳು |
|---|---|
| 1. ಇದು ಸಾರ್ವತ್ರಿಕವಾದದ್ದು<br>2. ಇದು ಪುರಾತನವಾದದ್ದು<br>3.ಬೇರೆ-ಬೇರೆ ರೂಪದಲ್ಲಿ ಇದು ವ್ಯಕ್ತವಾಗುತ್ತದೆ.<br>4.ಇದು ಸ್ವಭಾವತಹ ಸಾಮಾಜಿಕವಾದದ್ದು | 1.ಸಾರ್ವಜನಿಕ ಶಿಕ್ಷಣ ಹಾಗೂ ಸಾಮಾಜಿಕ ಭದ್ರತೆಗಳ ನಿರಾಕರಣೆ<br>2. ಸಾರ್ವತ್ರಿಕ ಆರೋಗ್ಯದ ನಿರಾಕರಣೆ<br>3.ಆದಾಯ ಮತ್ತು ಲಿಂಗ ಆಧಾರಿತ ತಾರತಮ್ಯ<br>4. ಬಡವ-ಶ್ರೀಮಂತ ಬೇಧಬಾವ |
| ಲಿಂಗತ್ವ ಅಸಮಾನತೆ ಹೇಗೆ ಉಂಟಾಗಿದೆ | |
| 1. ಮಹಿಳೆಯರನ್ನು ಸಮಾಜ ಪರಿಗಣಿಸುವ ರೀತಿ<br>2. ಮಹಿಳೆಗೆ ಶಿಕ್ಷಣದ ನಿರಾಕರಣೆ<br>3. ಮಹಿಳೆಗೆ ಆಸ್ತಿ ಹಕ್ಕಿನ ನಿರಾಕರಣೆ<br>4. ಮಹಿಳೆಗೆ ರಾಜಕೀಯ ಹಕ್ಕಿನ ನಿರಾಕರಣೆ. | |

| ಅಸ್ಪೃಶ್ಯತಾ ಆಚರಣೆಯಂತಹ ಸಾಮಜಿಕ ಪಿಡುಗನ್ನು ನಿವಾರಿಸಲು ನಿಮ್ಮ ಸಲಹೆಗಳು |
|---|
| 1. ಅಸ್ಪೃಶ್ಯತೆ ಆಚರಣೆಯು ಶಿಕ್ಷಾರ್ಹ ಅಪರಾಧವೆಂದು ಸಾರಬೇಕು.<br>2. ಸಂವಿಧಾನಾತ್ಮಕವಾಗಿ ಮತ್ತು ಶಾಸನಾತ್ಮಕವಾಗಿ ಕ್ರಮ ಕೈಗೊಳ್ಳಬೇಕು.<br>3. ಸಮೂಹ ಮಾಧ್ಯಮದ ಮೂಲಕ ಜನರಿಗೆ ತಿಳುವಳಿಕೆ ನೀಡಬೇಕು<br>4. ವಿದ್ಯಾರ್ಥಿಗಳಲ್ಲಿ ಅರಿವು ಮತ್ತು ಜಾಗೃತಿ ಮೂಡಿಸಬೇಕು. |

| 1857 ರ ದಂಗೆಗೆ ರಾಜಕೀಯ ಕಾರಣಗಳು | 1857 ರ ದಂಗೆಗೆ ಆರ್ಥಿಕ ಕಾರಣಗಳು |
|---|---|
| 1. ಲಾರ್ಡ ಡಾಲಹೌಸಿಯ 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಪದ್ಧತಿ ಜಾರಿಗೆ ತಂದನು.<br>2. ಇದರಿಂದ ದೇಶಿಯ ರಾಜರು ತಮ್ಮ ರಾಜ್ಯಗಳನ್ನು ಕಳೆದುಕೊಂಡರು<br>3. ಸತಾರ, ಜೈಪುರ, ಝಾನ್ಸಿ , ಬ್ರಿಟಿಷರ ವಶವಾದವು<br>4. ಬ್ರಿಟಿಷರು ತಂಜಾವೂರು & ಅರ್ಕಾಟ್ ನವಾಬನ ಪದವಿ ರದ್ದುಗೊಳಿಸಿದರು.<br>5. ಮೊಘಲ್ ದೊರೆ & ಅವಧ್ ನವಾಬನ ಪದಚ್ಯುತಿ<br>6. 1857ರ ಪ್ರತಿಭಟನೆ ಈ ಅಂಶಗಳ ಪ್ರೇರಕವಾದವು. | 1. ಇಂಗ್ಲೆಂಡಿನ ಕೈಗಾರಿಕಾ ಕ್ರಾಂತಿ<br>2. ಭಾರತೀಯ ವಸ್ತುಗಳ ಮೇಲೆ ಅಧಿಕ ತೆರಿಗೆ<br>3. ಭಾರತದ ಗೃಹ ಕೈಗಾರಿಕೆಗಳ ಅವನತಿ<br>4. ಲಕ್ಷಾಂತರ ಕಾರ್ಮಿಕರು ನಿರುದ್ಯೋಗಿಗಳಾದರು<br>5. ಕಂದಾಯಕ್ಕಾಗಿ ರೈತರ ಶೋಷಣೆ<br>6. ಇನಾಂ ಭೂಮಿಯನ್ನು ವಾಪಸ ಪಡೆದರು<br>7. ಇದು ರೈತರ ಪ್ರತಿ ಭಟನೆಗೆ ಕಾರಣವಾಯಿತು. |

| 1857 ರ ದಂಗೆಗೆ ಆಡಳಿತಾತ್ಮಕ ಕಾರಣಗಳು | 1857 ರ ದಂಗೆಗೆ ಸೈನಿಕ ಕಾರಣಗಳು |
|---|---|
| 1. ಬ್ರಿಟಿಷರು ತಂದ ಹೊಸ ಕಾನೂನುಗಳು<br>2. ಪಕ್ಷಪಾತದಿಂದ ಕೂಡಿದ ಕಾನೂನುಗಳು<br>3. ಇಂಗ್ಲೀಷ್ ನ್ಯಾಯಾಲಯದ ಭಾಷೆಯಾದದು<br>4. ಇಂಗ್ಲೀಷರ್ ಪರವಾಗಿದ್ದ ತೀರ್ಪುಗಳು<br>5. ಕಾನೂನಿನ ಆಶಯ ಜನರಿಗೆ ಅರ್ಥವಾಗಲಿಲ್ಲ | 1. ಸಾಗರೋತ್ತರ ಸೇವೆಗೆ ಒತ್ತಾಯ<br>2. ಭಾರತೀಯ ಸೈನಿಕರ ಶೋಚನೀಯ ಸ್ಥಿತಿ<br>3. ವೇತನ, ಬಡ್ತಿಯಲ್ಲಿ ಭಾರತೀಯರ ಸೈನಿಕರಿಗೆ ತಾರತಮ್ಯ<br>4. ಬ್ರಿಟಿಷ ವಶವಾದ ರಾಜ್ಯಗಳ ಸೈನಿಕರ ನಿರುದ್ಯೋಗ |

| 1857 ರ ದಂಗೆಗೆ ತಕ್ಷಣದ ಕಾರಣಗಳು |
|---|
| 1. ರಾಯಲ್ ಎನ್‌ಫೀಲ್ಡ್ ಹೊಸ ಬಂದೂಕಿನ ಬಳಕೆ<br>2. ಅದರ ತೋಟಾಗಳಿಗೆ ಹಸು & ಹಂದಿಯ ಕೊಬ್ಬು ಸವರಿದ್ದಾರೆಂಬ ವದಂತಿ ಹರಡಿತು.<br>3. ಬಂದೂಕುಗಳು ಬಳಸಲು ಸಿಪಾಯಿಗಳ ವಿರೋಧ<br>4. ಬ್ರಿಟಿಷರು ಒತ್ತಾಯಿಸಿದಾಗ ಮಂಗಲ್ ಪಾಂಡೆ ಅಧಿಕಾರಿಯೊಬ್ಬನ್ನು ಕೊಂದನು<br>5. ಮಂಗಲ್ ಪಾಂಡೆಯನ್ನು ಗಲ್ಲಿಗೇರಿಸಿದಾಗ ಆತನ ಸಹಚರರು ದಂಗೆಯೆದ್ದರು |

| 1857 ರ ದಂಗೆಯ ವಿಫಲತೆಗೆ ಕಾರಣಗಳು | 1857 ರ ದಂಗೆಯ ಪರಿಣಾಮಗಳು |
|---|---|
| 1. ಇದು ಉತ್ತರ ಭಾರತಕ್ಕೆ ಮಾತ್ರ ಸೀಮಿತ<br>2. ಸ್ವಹಿತಾಶಕ್ತಿ & ಹಕ್ಕಿಗಾಗಿ ನಡೆದ ಹೋರಾಟ<br>3. ಸೂಕ್ತ ಯೋಜನೆಯ ಕೊರತೆ<br>4. ಸೂಕ್ತ ನಾಯಕತ್ವದ ಕೊರತೆ<br>5. ಸೂಕ್ತ ಮಾರ್ಗದರ್ಶನ & ಸಂಘಟನೆಯ ಕೊರತೆ<br>6. ಲೂಟಿ ಮೂಲಕ ಸಿಪಾಯಿಗಳು ಜನರ ವಿಶ್ವಾಸ ಕಳೆದುಕೊಂಡರು<br>7. ದೇಶಿಯ ರಾಜರು ಬ್ರಿಟಿಷರಿಗೆ ಬೆಂಬಲ<br>8. ಶಸ್ತ್ರಾಸ್ತ್ರಗಳ ಕೊರತೆ | 1. ಕಂಪನಿಯ ಆಡಳಿತ ಅಂತ್ಯವಾಗಿ ರಾಣಿಯ ಆಡಳಿತ ನೇರವಾಗಿ ಆರಂಭವಾಯುತು<br>2. ಭಾರತದ ವ್ಯವಹಾರಗಳ ಕಾರ್ಯದರ್ಶಿಗೆ ಭಾರತದ ವ್ಯವಹಾರಗಳ ಜವಬ್ದಾರಿ<br>3. 1858 ರಲ್ಲಿ ರಾಣಿಯ ಭರವಸೆಗಳ ಘೋಷಣೆ<br>4. ಭಾರತೀಯರ ಬೆಂಬಲವಿಲ್ಲದೆ ಆಡಳಿತ ನಡೆಸುವುದು ಕಷ್ಟ ಎಂದು ಅರಿತರು<br>5. ಮುಂದಿನ ಹೋರಾಟಕ್ಕೆ ದಕ್ಸೂಚಿ<br>6. ಸ್ವಾತಂತ್ರ್ಯ ಹೋರಾಟಕ್ಕೆ ಪರ್ಯಾಯ ಮಾರ್ಗ ಅನ್ವೇಷಣೆ |

| ಭಾರತದ ಪ್ರಾಕೃತಿಕ ಲಕ್ಷಣಗಳು | ಹಿಮಾಲಯ ಪರ್ವತಗಳ ಪ್ರಾಮುಖ್ಯತೆ |
|---|---|
| 1. ಉತ್ತರದ ಪರ್ವಗಳು<br>2. ಉತ್ತರದ ಮಹಾ ಮೈದಾನ<br>3. ಪರ್ಯಾಯ ಪ್ರಸ್ಥಭೂಮಿ<br>4. ಕರಾವಳಿ ಮೈದಾನ ಮತ್ತು ದ್ವೀಪಗಳು | 1. ಶೀತ ಮಾರುತಗಳನ್ನು ತಡೆಯುತ್ತದೆ.<br>2. ಅನೇಕ ಖನಿಜ ಸಂಪನ್ಮೂಲಗಳ ಆಗರ<br>3. ಅನೇಕ ನದಿಗಳು ಜನ್ಮ ಸ್ಥಳ<br>4. ಪ್ರವಾಸೋದ್ಯಮ ಕೇಂದ್ರ |
| ಉತ್ತರ ಮೈದಾನಗಳ ಪ್ರಾಮುಖ್ಯತೆ | ಪರ್ಯಾಯ ಪ್ರಸ್ಥಭೂಮಿಯ ಆರ್ಥಿಕ ಪ್ರಾಮುಖ್ಯತೆ |
| 1. ಇದು ಮೆಕ್ಕಲು ಮಣ್ಣಿನಿಂದ ಕೂಡಿದ್ದು ಕೃಷಿಗೆ ಯೋಗ್ಯವಾಗಿದೆ.<br>2. ಸಮತಟ್ಟಾದ ಭೂ ಭಾಗ ಇರುವದರಿಂದ ಸಾರಿಗೆ –ಸಂಪರ್ಕಕ್ಕೆ ಅನುಕೂಲವಾಗಿದೆ.<br>3. ಅನೇಕ ಕೈಗಾರಿಕೆಗಳು ಈ ಭಾಗದಲ್ಲಿವೆ.<br>4. ಪವಿತ್ರ ಯಾತ್ರಾ ಸ್ಥಳಗಳಿಂದ ಪ್ರವಾಸೋದ್ಯಮ ಬೆಳವಣಿಗೆ ಹೊಂದಿದೆ. | 1. ಅಪಾರ ಖನಿಜ ಸಂಪನ್ಮೂಲಗಳಿವೆ<br>2. ಜಲಪಾತಗಳಿಂದಾಗಿ ಜಲವಿದ್ಯುಚ್ಛಕ್ತಿಯ ಉತ್ಪಾದನೆಗೆ ಸಹಾಯಕಾರಿಯಾಗಿದೆ.<br>3. ದಕ್ಷಿಣ ಭಾರತದ ಅನೇಕ ನದಿಗಳ ಉಗಮ ಸ್ಥಾನವಾಗಿದೆ<br>4. ಕಪ್ಪು ಮಣ್ಣಿನಿಂದ ಕೂಡಿದ್ದು ಕೃಷಿಗೆ ಸಹಾಯಕಾರಿಯಾಗಿದೆ. |
| ಕರಾವಳಿ ಮೈದಾನದ ಆರ್ಥಿಕ ಪ್ರಾಮುಖ್ಯತೆ | ಸಿವಾಲಿಕ್ ಬೆಟ್ಟಗಳ ಲಕ್ಷಣಗಳು |
| 1. ಇಲ್ಲಿ ಅನೇಕ ಬಂದರುಗಳು ಇರುವದರಿಂದ ವಿದೇಶಿ ವ್ಯಾಪಾರಕ್ಕೆ ಸಹಾಯಕಾರಿಯಾಗಿದೆ.<br>2. ಉಪ್ಪಿನ ಉತ್ಪಾದನೆಗೆ ಸಹಾಯಕಾರಿಯಾಗಿದೆ<br>3. ಮೀನುಗಾರಿಕೆಗೆ ಅನುಕೂಲಕರವಾಗಿದೆ.<br>4. ಇಲ್ಲಿನ ಬೀಚಗಳು ಪ್ರವಾಸೋದ್ಯಮದ ಬೆಳವಣಿಗೆ ಸಹಾಯಕಾರಿಯಾಗಿದೆ. | 1. ಹಿಮಾಲಯದ ಪಾದ ಬೆಟ್ಟಗಳಾಗಿವೆ<br>2. ಇವು ಕಡಿಮೆ ಎತ್ತರವನ್ನು ಹೊಂದಿವೆ<br>3. ಜಮ್ಮು-ಕಾಶ್ಮೀರದಿಂದ ಅರುಣಾಚಲ ಪ್ರದೇಶದವರೆಗೆ ಹಬ್ಬಿದೆ.<br>4. ಇಲ್ಲಿ ಕಿರಿದಾದ ಮತ್ತು ಸಮತಟ್ಟಾದ "ಡೂನಗಳಿವೆ" |

| ಪಶ್ಚಿಮ ಘಟ್ಟಗಳು | ಪೂರ್ವ ಘಟ್ಟಗಳು |
|---|---|
| 1. ಪಶ್ಚಿಮ ಘಟ್ಟಗಳು ಎತ್ತರವಾಗಿವೆ.<br>2. ಪಶ್ಚಿಮ ಘಟ್ಟಗಳು ನಿರಂತರವಾಗಿವೆ.<br>3. ಇಲ್ಲಿ ಅನೇಕ ಗಿರಿಧಾಮಗಳಿವೆ.<br>4. ಅನೇಕ ನದಿಗಳ' ಉಗಮಸ್ಥಾನ | 1. ಪೂರ್ವ ಘಟ್ಟಗಳು ಎತ್ತರವಾಗಿಲ್ಲ.<br>2. ಪೂರ್ವ ಘಟ್ಟಗಳು ನಿರಂತರವಾಗಿಲ್ಲ.<br>3. ಇಲ್ಲಿ ಯಾವುದೇ ಗಿರಿಧಾಮಗಳಿಲ್ಲ.<br>4. ನದಿಗಳ ಮುಖಜ ಭೂಮಿಯನ್ನು ಹೊಂದಿದೆ. |

| ಅರಣ್ಯ ನಾಶಕ್ಕೆ ಕಾರಣಗಳು | ಅರಣ್ಯ ಸಂರಕ್ಷಣಾ ವಿಧಾನಗಳು |
|---|---|
| 1. ವ್ಯವಸಾಯದ ವಿಸ್ತರಣೆ<br>2. ರಸ್ತೆ ಮತ್ತು ರೈಲು ಮಾರ್ಗಗಳು<br>3. ನೀರಾವರಿ ಯೋಜನೆಗಳ ನಿರ್ಮಾಣ<br>4. ಕಾಡ್ಗಿಚ್ಚು<br>5. ಗಣಿಗಾರಿಕೆ | 1. ಘರ್ಷಿತ ಮರಗಳನ್ನು ತೆಗೆಯುವುದು<br>2. ರೋಗಗಳನ್ನು ನಿಯಂತ್ರಿಸುವುದು<br>3. ಸಸಿಗಳನ್ನು ನೆಡುವುದು.<br>4. ಮೇಯಿಸುವಿಕೆ ನಿಯಂತ್ರಣ |

| ಅನಾಭಿವೃದ್ಧಿಗೆ ಕಾರಣಗಳು | ಭಾರತದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ ಕಡಿಮೆ ಇರುವುದಕ್ಕೆ ಕಾರಣಗಳು |
|---|---|
| 1. ಕಡಿಮೆ ತಲಾದಾಯ<br>2. ನಿರುದ್ಯೋಗ<br>3. ಬಡತನ<br>4. ಜನಸಂಖ್ಯೆಯಲ್ಲಿ ಹೆಚ್ಚಳ<br>5. ಅಸಮಾನತೆ<br>6. ಸಂಪನ್ಮೂಲಗಳ ಸಮರ್ಪಕ ಸದ್ಬಳಕೆ ಇಲ್ಲದಿರುವುದು. | 1. ಕೃಷಿಯ ಹಿಂದುಳಿಕೆ<br>2. ಆರೋಗ್ಯದ ಕೊರತೆ<br>3. ನಿರುದ್ಯೋಗ<br>4. ಸಾಮಾಜಿಕ ಭದ್ರತೆಯ ಕೊರತೆ<br>5. ಅನಕ್ಷರತೆ<br>6. ಜನಸಂಖ್ಯಾ ಸ್ಫೋಟ<br>7. ಆಹಾರದ ಕೊರತೆ |
| ಲಿಂಗ ಸಮಾನತೆಯನ್ನು ಹೇಗೆ ಸಾಧಿಸಬಹುದು | "ಮಹಿಳಾ ಸ್ವಸಹಾಯಕ ಸಂಘಗಳು ಮಹಿಳಾ ಸಬಲೀಕರಣಕ್ಕೆ ಪೂರಕವಾಗಿದೆ" ಸಮರ್ಥಿಸಿ |
| 1. ಮಹಿಳಾ ಸಾಕ್ಷರತೆ<br>2. ಸಮಾನ ವೇತನ ಅವಕಾಶ<br>3. ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಅವಕಾಶ<br>4. ಮಹಿಳಾ ಸಬಲೀಕರಣ<br>5. ಮಹಿಳೆಯರ ವಿರುದ್ಧ ಹಿಂಸೆ ತಡೆಗಟ್ಟುವುದು.<br>6. ಚುನಾಯಿತ ಸಂಸ್ಥೆಗಳಲ್ಲಿ ಮೀಸಲಾತಿ | 1. ಮಹಿಳೆಯರು ವ್ಯವಹಾರ ನಿರ್ವಹಿಸುವ ಸಾಮರ್ಥ್ಯ ಗಳಿಸಿರುತ್ತಾರೆ<br>2. ಮಹಿಳೆಯರು ಆದಾಯ ಗಳಿಸುವ ಸಾಮರ್ಥ್ಯ ಗಳಿಸಿರುತ್ತಾರೆ<br>3. ಆರ್ಥಿಕ ಚಟುವಟಿಕೆಯಲ್ಲಿ ಮಹಿಳಾ ಭಾಗವಹಿಸುವಿಕೆಯನ್ನು ಪ್ರೇರೇಪಿಸುತ್ತದೆ<br>4. ಸಹಕಾರ ತತ್ವವನ್ನು ಕಲಿಯುವ ಅವಕಾಶ ನೀಡುತ್ತದೆ |

| ಅಭಿವೃದ್ಧಿ ಹೊಂದಿದೆ ಹಾಗೂ ಅಭಿವೃದ್ಧಿ ರಾಷ್ಟ್ರಳ ನಡುವಿನ ವ್ಯತ್ಯಾಸಗಳು | |
|---|---|
| ಅಭಿವೃದ್ಧಿ ಹೊಂದಿದ ರಾಷ್ಟ್ರಗಳು | ಅಭಿವೃದ್ಧಿ ಹೊಂದದ ರಾಷ್ಟ್ರಗಳು |
| 1. ರಾಷ್ಟ್ರೀಯ ಆದಾಯದಲ್ಲಿ ಹೆಚ್ಚಳ<br>2. ತಲಾವರಮಾನದಲ್ಲಿ ಹೆಚ್ಚಳ<br>3. ಕಡಿಮೆ ನಿರುದ್ಯೋಗ<br>4. ವೈದ್ಯಕೀಯ ಸೌಲಭ್ಯಗಳ ಲಭ್ಯತೆ<br>5. ಹೆಚ್ಚಿನ ಸಾಕ್ಷರತೆ<br>6. ಆಹಾರ, ವಸತಿ, ಬಟ್ಟೆಯ ಲಭ್ಯತೆ | 1. ಕಡಿಮೆ ರಾಷ್ಟ್ರೀಯ ಆದಾಯ<br>2. ಕಡಿಮೆ ತಲಾ ವರಮಾನ<br>3. ನಿರುದ್ಯೋಗ ಮಟ್ಟದಲ್ಲಿ ಹೆಚ್ಚಳ<br>4. ವೈದ್ಯಕೀಯ ಸೌಲಭ್ಯ ಕೊರತೆ<br>5. ಕಡಿಮೆ ಸಾಕ್ಷರತೆ<br>6. ಆಹಾರ, ವಸತಿ, ಬಟ್ಟೆಯ ಕೊರತೆ |

| ಕೋಮುವಾದ ಮಾರಕ ಹೇಗೆ? | ಕೋಮುವಾದ ಹೋಗಲಾಡಿಸುವ ಕ್ರಮಗಳು |
|---|---|
| 1. ಸಮಾಜದ ನೆಮ್ಮದಿ ನಾಶವಾಗುತ್ತದೆ<br>2. ಸಮಾಜದಲ್ಲಿ ಅಪನಂಬಿಕೆ & ಭಯದ ಸೃಷ್ಟಿ<br>3. ಸಮಾಜದಲ್ಲಿ ಗುಂಪುಗಾರಿಕೆ ಉಂಟು ಮಾಡುತ್ತದೆ<br>4. ರಾಜಕೀಯ ಪೈಪೋಟಿ<br>5. ದೇಶದ ಐಕ್ಯತೆ & ಸಮಗ್ರತೆಗೆ ಧಕ್ಕೆ | 1. ಸಮಾನ ನಾಗರೀಕ ಸಂಹಿತೆ<br>2. ಜಾತ್ಯಾತೀತ ಮನೋಭಾವದ ಬೆಳೆವಣಿಗೆ<br>3. ಮತೀಯ ಮೂಲಭೂತವಾದಕ್ಕೆ ವಿರೋಧ<br>4. ಆರೋಗ್ಯಕರ ಸುದ್ಧಿ ಮಾಧ್ಯಮ<br>5. ಕ್ರಮಬದ್ಧ ಕಾನೂನು ವ್ಯವಸ್ಥೆ |

| ಎಲ್ಲಾ ಸಮಾಜಗಳ ಸುಧಾರಣೆಗಳು | ಆಲಿಘರ್ ಚಳುವಳಿಯ ಉದ್ದೇಶಗಳು |
|---|---|
| 1. ಅಸ್ಪೃಶ್ಯತೆ, ಸ್ತ್ರೀ, ಶೋಷಣೆಗೆ ವಿರೋಧ<br>2. ವಿಧವಾ ವಿವಾಹ ಪ್ರೋತ್ಸಾಹ<br>3. ಸ್ತ್ರೀ ಶಿಕ್ಷಣಕ್ಕೆ ಒತ್ತು<br>4. ಮೂಢನಂಬಿಕೆಗೆ ವಿರೋಧ<br>5. ಸಾರ್ವತ್ರಿಕ ಶಿಕ್ಷಣಕ್ಕೆ ಒತ್ತು<br>6. ಸ್ತ್ರೀ ಪುರುಷರ ಸಮಾನತೆ | 1. ಮಹಿಳಾ ಶಿಕ್ಷಣಕ್ಕೆ ಆದ್ಯತೆ ನೀಡುವುದು.<br>2. ಬಹುಪತ್ನಿತ್ವಕ್ಕೆ ವಿರೋಧ<br>3. ಮುಸ್ಲಿಂ ಸಮಾಜದಲ್ಲಿ ಇಂಗ್ಲೀಷ್ ಶಿಕ್ಷಣಕ್ಕೆ ಪ್ರೋತ್ಸಾಹಿಸುವುದು<br>4. ಪಾಶ್ಚಿಮಾತ್ಯ ವಿಜ್ಞಾನ ಹಾಗೂ ಸಂಸ್ಕೃತಿಯನ್ನು ಪ್ರಸಾರ ಮಾಡುವುದು. |
| **ರಾಮಕೃಷ್ಣ ಮಿಷನ್ನಿನ ದೃಷ್ಟಿಕೋನಗಳು** | **ಸ್ವಾಮಿ ವಿವೇಕಾನಂದರು ಯುವಶಕ್ತಿಯ ಪ್ರೇರಕರಾಗಿದ್ದರು ಹೇಗೆ ವಿವರಿಸಿರಿ** |
| 1. ರಾಮಕೃಷ್ಣ ಪರಮಹಂಸರ ಬೋಧನೆಗಳ ಪ್ರಸಾರ<br>2. ಭಾರತೀಯ ತತ್ವಜ್ಞಾನದ ಮಹತ್ವವನ್ನು ತಿಳಿಸುವುದು.<br>3. ಜಾತಿರಹಿತ ಸಮಾಜದ ಸ್ಥಾಪನೆಯನ್ನು ಪ್ರೋತ್ಸಾಹಿಸುವುದು.<br>4. ಬಡತನ, ಶೋಷಣೆ, ಅನಕ್ಷರತೆಯ ನಿರ್ಮೂಲನೆ ಮಾಡುವುದು. | 1. ಇವರು ಯುವಕರಿಗೆ"ಏಳಿ, ಏದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ" ಎಂದು ಕರೆ ನೀಡಿದರು<br>2. ವ್ಯಕ್ತಿಯಲ್ಲಿರುವ ಸಾಮರ್ಥ್ಯದ ಪೂರ್ಣ ಬಳಕೆಯನ್ನು ಪ್ರೇರೇಪಿಸಿದರು.<br>3. ಸಮಾಜ ಸೇವೆಯ ಮಹತ್ವವನ್ನು ತಿಳಿಸಿದರು.<br>4. ಭಾರತದ ಸಂಸ್ಕೃತಿಯ ಮಹತ್ವವನ್ನು ಚಿಕಾಗೊ ವಿಶ್ವಧರ್ಮ ಸಮ್ಮೇಳನದಲ್ಲಿ ವಿಶ್ವಕ್ಕೆ ಸಾರಿದರು. |

| ಕ್ರ.ಸಂ | ಪ್ರಮುಖ ಸಂಘಗಳು ಮತ್ತು ಚಳುವಳಿಗಳು | ಸ್ಥಾಪಕರು |
|---|---|---|
| 01 | ಬ್ರಹ್ಮ ಸಮಾಜ | ರಾಜಾರಾಮ ಮೋಹನ್‌ರಾಯ |
| 02 | ಆತ್ಮೀಯ ಸಭಾ | ರಾಜಾರಾಮ ಮೋಹನ್‌ರಾಯ |
| 03 | ಆರ್ಯಸಮಾಜ | ದಯಾನಂದ ಸರಸ್ವತಿ |
| 04 | ಪ್ರಾರ್ಥನಾ ಸಮಾಜ | ಡಾ. ಆತ್ಮರಾಮ್ ಪಾಂಡುರಂಗ |
| 05 | ಸತ್ಯ ಶೋಧಕ ಸಮಾಜ | ಜ್ಯೋತಿಭಾ ಪುಲೆ |
| 06 | ಅಲಿಘರ್ ಸುಧಾರಣಾ ಚಳುವಳಿ | ಸರ್ ಸಯ್ಯದ್ ಅಹ್ಮದಖಾನ್ |
| 07 | ರಾಮಕೃಷ್ಣ ಆಶ್ರಮ | ಸ್ವಾಮಿ ವಿವೇಕಾನಂದ |
| 08 | ಥಿಯೋಸಾಫಿಕಲ್ ಸೊಸೈಟಿ | ಮೇಡಂ ಬ್ಲವಾಟ್ & ಅಲ್ಕಾಟ್ |
| 09 | "ಹೋಮ್ ರೂಲ್ ಲೀಗ್" | ಅನಿಬೆಸೆಂಟ |
| 10 | ಆತ್ಮಗೌರವ ಚಳುವಳಿ | ರಾಮಸ್ವಾಮಿ  ನಾಯ್ಕರ್ |
| 11 | ದ್ರಾವಿಡ ಕಳಗಂ ಸಂಘಟನೆ | ಪೆರಿಯಾರ್ |
| 12 | ಶುದ್ಧಿ ಚಳುವಳಿ | ದಯಾನಂದ ಸರಸ್ವತಿ |
| 13 | ವೇದಗಳಿಗೆ ಮರಳಿ | ದಯಾನಂದ ಸರಸ್ವತಿ |
| 14 | ಗೋ ರಕ್ಷಣಾ ಸಂಘ | ದಯಾನಂದ ಸರಸ್ವತಿ |

| ಭಾರತ-ಪಾಕಿಸ್ತಾನಗಳ ನಡುವಿನ ಸಂಭಂದ ಹದಗೆಡಲು ಕಾರಣಗಳು | ಭಾರತ-ಚೀನಾ ನಡುವಿನ ಸಂಭಂದ ಹದಗೆಡಲು ಕಾರಣಗಳು |
|---|---|
| 1. ಕಾಶ್ಮೀರ ಸಮಸ್ಯೆ<br>2. ಇತ್ಯರ್ಥವಾಗದ ಜಲವಿವಾದಗಳು<br>3. ಪಾಕ್ ಪ್ರಾಯೋಜಿತ ಭಯೋತ್ಪಾದನೆ<br>4. ಪಾಕಿಸ್ತಾನ – ಚೀನಾಗಳ ನಡುವಿನ ಮೈತ್ರಿ<br>5. ಪಾಕಿಸ್ತಾನದ ಮಿಲಿಟರಿಶಾಹಿತ್ವ ಹಾಗೂ ರಾಜಕೀಯ ಅಸ್ಥಿರತೆ<br>6. ಪಾಕ್ ಪ್ರಾಯೋಜಿತ ಅಕ್ರಮ ನುಸುಳುವಿಕೆ. | 1. ಭಾರತದ ಟಿಬೆಟ್ ಬಗೆಗಿನ ನಿಲುವು<br>2. ಚೀನಾದ ಮಾವೊವಾದಿಗಳಿಂದ ಭಾರತದಲ್ಲಿ ನಕ್ಸಲ್ವಾದದ ಚಟುವಟಿಕೆಗಳು<br>3. ಚೀನಾ ಹಾಗೂ ಪಾಕ್ ಮೈತ್ರಿ<br>4. ಅರುಣಾಚಲ ಪ್ರದೇಶದ ಬಗ್ಗೆ ಚೀನಾದ ಧೋರಣೆಗಳು<br>5. ಇತ್ಯರ್ಥವಾಗದಿರುವ ಗಡಿ ವಿವಾದಗಳು<br>6. ರಾಜತಾಂತ್ರಿಕ ಮಾತುಕತೆಗಳಲ್ಲಿನ ಬದ್ಧತೆಯ ಕೊರತೆ |
| ಭಾರತ ಹಾಗೂ ಅಮೆರಿಕಾಗಳ ನಡುವಿನ ಸಂಬಂಧಗಳನ್ನು ಬರೆಯಿರಿ | ಭಾರತ ಹಾಗೂ ರಷ್ಯಾ ನಡುವಿನ ಸಂಬಂಧಗಳನ್ನು ಬರೆಯಿರಿ |
| 1. ಎರಡು ದೇಶಗಳು ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರಗಳಾಗಿವೆ<br>2. 1962ರ ಭಾರತ-ಚೀನಾ ಯುದ್ಧದಲ್ಲಿ ಅಮೇರಿಕಾ ನೆರವು ನೀಡಿದೆ.<br>3. ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಸಮಾನ ಹಿತಾಸಕ್ತಿ ಹೊಂದಿದೆ.<br>4. ಬಾಹ್ಯಾಕಾಶ, ರಕ್ಷಣೆ, ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ಸಹಕಾರ ನೀಡಿದೆ.<br>5. ಪಂಚವಾರ್ಷಿಕ ಯೋಜನೆಗಳಿಗೆ ನೆರವು ನೀಡುತ್ತದೆ.<br>6. ಭಾರತ ಪಾಕಿಸ್ತಾನ ಯುದ್ಧದಲ್ಲಿ ನೆರವು ನೀಡಿದೆ. | 1. ಪ್ರಾರಮಭದಿಂದಲೂ ಭಾರತ-ರಷ್ಯಾಗಳ ನಡುವಿನ ಸಂಬಂಧ ಉತ್ತಮವಾಗಿದೆ.<br>2. ಭಾರತದ ಆರ್ಥಿಕ ಹಾಗೂ ಎಲ್ಲಾ ಯೋಜನೆಗಳ ರಷ್ಯಾ ಸಹಕರಿಸುತ್ತಿದೆ.<br>3. 1961 ರ ಗೋವಾ ವಿಮೋಚನೆಯಲ್ಲಿ ಸಹಕಾರ ನೀಡಿದೆ.<br>4. 1966 ರಲ್ಲಿ ತಾಷ್ಕೆಂಟ್ ಒಪ್ಪಂದದ ಮೂಲಕ ಭಾರತ –ಪಾಕ್ ಮಧ್ಯೆ ಕದನ ವಿರಾಮ ಸ್ಥಾಪಿಸಿತು<br>5. 1971 ರಲ್ಲಿ 20 ವರ್ಷಗಳ ಶಾಂತಿ –ಸಹಕಾರ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.<br>6. ಭಿಲಾಯ್ ಬೋಕಾರೋಗಳ ಉಕ್ಕಿನ ಕಾರ್ಖಾನೆಗೆ ನೇರವು<br>7. ವಿಶ್ವಸಂಸ್ಥೆಯಲ್ಲಿ ಭಾರತಕ್ಕೆ ಶಾಶ್ವತ ಸದಸ್ಯತ್ವ ಒದಗಿಸಲು ರಷ್ಯಾ ಸಹಕರಿಸುತ್ತಿದೆ. |
| ಭಾರತ ಮತ್ತು ಪಾಕಿಸ್ತಾನದ ಮಧ್ಯ ಉದ್ವಗ್ನತೆಗೆ ಕಾರಣವಾದ ಅಂಶಗಳು | ಅನ್ಯ ರಾಷ್ಟ್ರಗಳೊಂದಿಗೆ ಉತ್ತಮ ಬಾಂದವ್ಯ ಅವಶ್ಯಕ ಏಕೆ? |
| 1. ಜಮ್ಮು-ಕಾಶ್ಮೀರ ಸಮಸ್ಯೆ<br>2. ಭಯೋತ್ಪಾದನೆ<br>3. ನದಿ ನೀರಿನ ವಿವಾದ | 1. ಇದರಿಂದ ದೇಶಗಲ ನಡುವೆ ಉತ್ತಮ ಬಾಂಧವ್ಯ ನೆಲೆಸುತ್ತದೆ.<br>2. ವಿದೇಶ ವ್ಯಾಪಾರ ಉತ್ತಮಗೊಳ್ಳುತ್ತದೆ<br>3. ಕೊರತೆಯಲ್ಲಿರುವ ಸಂಪನ್ಮೂಲಗಳ ಎರವಲು ಪಡೆಯಲು ಸಹಕಾರಿ<br>4. ತಂತ್ರಜ್ಞಾನ ವಿನಿಮಿಯಕ್ಕೆ ಅವಶಾಕ ಸಿಗುತ್ತದೆ.<br>5. ಹಣಕಾಸಿನ ನೆರವು ಪಡೆಯಲು ಸಹಕಾರಿ |
| **ಭಯೋತ್ಪಾದನೆಯ ಪರಿಣಾಮಗಳು**<br>1. ಭಯ ಮತ್ತು ಆತಂಕದ ವಾತಾವರಣ ಸೃಷ್ಟಿ<br>2. ವ್ಯಕ್ತಿಗಳಿಗೆ /ಸೊತ್ತುಗಳಿಗೆ ಅಪಾರ ಹಾನಿ<br>3. ಸರಕಾರಕ್ಕೆ ನಕಾರಾತ್ಮಕ ಮನೋಭಾವ<br>4. ಮಾನಸಿಕ ವೇದನೆ ನೀಡುತ್ತದೆ | |

| ಭಾರತದಲ್ಲಿ ಗ್ರಾಮೀಣ ಆರ್ಥಿಕ ಪರಿಸ್ಥಿತಿ ಹೇಗಿದೆ | ಗ್ರಾಮೀಣಾಭಿವೃದ್ಧಿಯ ಮಹತ್ವವನ್ನು ತಿಳಿಸಿ |
|---|---|
| 1. ಜನರು ಕೃಷಿಯನ್ನೇ ಅವಲಂಬಿಸಿದ್ದಾರೆ<br>2. ಬಡತನ ಹೆಚ್ಚಾಗಿದೆ<br>3. ಮೂರನೇ ಒಂದು ಭಾಗದ ಜನರು ಕಡುಬಡತನದಲ್ಲಿದ್ದಾರೆ<br>4. ಗ್ರಾಮೀಣ ಗುಡಿ ಕೈಗಾರಿಕೆಗಳು ಅವನತಿ<br>5. ಶೇಖಡಾ 60% ರಷ್ಟು ಜನರು ಪ್ರಾಥಮಿಕ ವಲಯದಲ್ಲಿ ದುಡಿಯುತ್ತಿದ್ದಾರೆ<br>6. ರಾಷ್ಟ್ರೀಯ ಆದಾಯಕ್ಕೆ ಪ್ರಾಥಮಿಕ ವಲಯದ ಪಾಲು ನಿರಂತರವಾಗಿ ಕಡಿಮೆಯಾಗುತ್ತಿದೆ<br>7. ನಗರ ಮತ್ತು ಹಳ್ಳಿಗಳ ನಡುವಿನ ಅಂತರ ದಿನೇ ದಿನೇ ಹೆಚ್ಚಾಗುತ್ತಿದೆ | 1. ಗ್ರಾಮೀಣ ಪ್ರದೇಶದ ಬಡತನ, ನಿರುದ್ಯೋಗ, ಅನಕ್ಷರತೆ ನಿರ್ಮೂಲನೆ ಮಾಡವುದು<br>2. ಜನರ ದುಡಿಯುವ ಸಾಮರ್ಥ್ಯ ಹೆಚ್ಚಿಸುವುದು<br>3. ಗ್ರಾಮಗಳಿಗೆ ವಿದ್ಯುತ್, ನೀರಾವರಿ, ಸಾರಿಗೆ, ಸಂಪರ್ಕ ಒದಗಿಸುವುದು<br>4. ಕೃಷಿ ಹಾಗೂ ಕೃಷಿ ಸಂಬಂಧಿತ ಚಟುವಟಿಕೆಗಳ ಅಭಿವೃದ್ಧಿ<br>5. ಸಣ್ಣ ಹಾಗೂ ಗುಡಿ ಕೈಗಾರಿಕೆಗಳ ಅಭಿವೃದ್ಧಿ<br>6. ಗ್ರಾಮದಲ್ಲಿನ ಹಿಂದುಳಿದ,ಪ.ಜಾತಿ/ಪ.ಪಂಗಡದ, ಕೃಷಿ ಕಾಮೀಕರ, ಬಡವರ ಉದ್ಧಾರ |
| ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಕಲ್ಪನೆಯನ್ನು ವಿಕೇಂದ್ರಿಕರಣ ಹಿನ್ನಲೆಯಲ್ಲಿ ತಿಳಿಸಿ | ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳ ಪಾತ್ರವನ್ನು ವಿವರಿಸಿ |
| 1. ಹಳ್ಳಿಯ ಆಡಳಿತ ಗ್ರಾಮಸ್ಥರಿಗೆ ವಹಿಸುವುದು.<br>2. ಹಳ್ಳಿಯ ಅಭಿವೃದ್ಧಿಯ ಜವಾಬ್ದಾರಿಯನ್ನು ಗ್ರಾಮಸ್ಥರಿಗೆ ವಹಿಸುವುದು.<br>3. ವಿಕೇಂದ್ರಿಕರಣದಿಂದ ಗ್ರಾಮಗಳು ಸ್ವಾವಲಂಬಿ,ಸ್ವಯಂಪೂರ್ಣ ಸಮೃದ್ಧಗೊಳ್ಳುವುದು<br>4. ಗ್ರಾಮಗಳು ಸ್ವಾವಲಂಬಿ, ಸ್ವಯಂಪೂರ್ಣ, ಸಮೃದ್ಧಗೊಳ್ಳುವುದನ್ನೇ "ಗ್ರಾಮ ಸ್ವರಾಜ್ಯ" ಎನ್ನುವರು<br>5. ವಿಕೇಂದ್ರಿಕರಣದಿಂದ ಎಲ್ಲಾ ರೀತಿಯ ಶೋಷಣೆ ತಡೆಯಬಹುದು<br>6. ಮಾನವನ ಸ್ವಾತಂತ್ರ ಮತ್ತು ಘನತೆಯನ್ನು ವಿಕೇಂದ್ರಿಕರಣವು ಸಂಕರ್ಷಿಸುತ್ತದೆ. | 1. ಗ್ರಾಮಗಳಿಗೆ ವಿದ್ಯುತ್, ನೀರಾವರಿ, ಸಾರಿಗೆ, ಸಂಪರ್ಕ ಒದಗಿಸುವುದು<br>2. ಕೃಷಿ ಹಾಗೂ ಕೃಷಿ ಸಂಬಂಧಿತ ಚಟುವಟಿಕೆಗಳ ಅಭಿವೃದ್ಧಿ<br>3. ಸಣ್ಣ ಹಾಗೂ ಗುಡಿ ಕೈಗಾರಿಕೆಗಳ ಅಭಿವೃದ್ಧಿ<br>4. ಗ್ರಾಮದಲ್ಲಿನ ಹಿಂದುಳಿದ,ಪ.ಜಾತಿ/ಪ.ಪಂಗಡದ, ಕೃಷಿ ಕಾರ್ಮಿಕರ, ಬಡವರ ಉದ್ಧಾರ<br>5. ಉದ್ಯೋಗ ಖಾತರಿ ಮತ್ತು ವಸತಿ ಯೋಜನೆ ಅನುಷ್ಠಾನ<br>6.ಗ್ರಾಮೀಣವೃದ್ಧರು,ಅಂಗವಿಕಲರು,ವಿಧವೆಯರನ್ನು ಗುರುತಿಸಿ ಸೌಲಭ್ಯಗಳನ್ನು ಒದಗಿಸುವುದು.<br>7. ಸುವರ್ಣ ಗ್ರಾಮೋದಯ ಯೋಜನೆ ಅನುಷ್ಟಾನ. |

| ಪಂಚಾಯತ್ ರಾಜ್ ವ್ಯವಸ್ಥೆಯ ಪ್ರಮುಖ ಲಕ್ಷಣಗಳು |
|---|
| 1. ಗ್ರಾಮ ಪಂಚಾಯಿತಿ, ತಾಲ್ಲೂಕಾ ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿಗಳುಳ್ಳ ಮೂರು ಹಂತದ ಪಂಚಾಯಿತಿ ವ್ಯವಸ್ಥೆ ಇದ್ದು ಗ್ರಾಮ ಸಭೆಯು ಅದರ ತಳಹದಿಯಾಗಿದೆ.<br>2. ನೇರ ಹಾಗೂ ನಿಯಮಿತ ಚುನಾವಣೆಗಳು<br>3. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಮತ್ತು ಮಹಿಳೆಯರಿಗಾಗಿ ಸ್ಥಾನ ಮೀಸಲಾತಿ ನೀಡಿಕೆ<br>4. ಹಣಕಾಸು, ಆಡಳಿತಾತ್ಮಕ, ಮುಂಗಡಪತ್ರ ಮಂಡಿಸುವ ಮತ್ತು ಲೆಕ್ಕ ಪರಿಶೋಧಿಸುವ ಜವಾಬ್ದಾರಿಗಳ ನೀಡಿಕೆ.<br>5. ಕಾರ್ಯ ನಿರ್ವಾಹಕ ಮತ್ತು ಇತರ ಸಿಬ್ಬಂದಿ ನೀಡಿಕೆ |

### 1. ಡಾ. ಪ್ರತಾಪರೆಡ್ಡಿ

1. ಭಾರತದಲ್ಲಿ ಆರೋಗ್ಯಕ್ಷೇತ್ರದಲ್ಲಿ ವೈದ್ಯಶಾಲೆಗಳ ಸಂಕೀರ್ಣವನ್ನು ಅಭಿವೃದ್ಧಿ ಪಡಿಸಿದವರಲ್ಲಿ ಮೊದಲಿಗರಾಗಿದ್ದಾರೆ.
2. "ಅಪೋಲೋ" ವ್ಯದ್ಯಶಾಲೆಗಳ ಗುಂಪು ಹುಟ್ಟು ಹಾಕಿದ್ದಾರೆ.
3. ರೋಗಿಯು ತನ್ನ ತೆರೆದ ಹೃದಯ ಶಸ್ತ್ರ ಚಿಕ್ಸಿತೆಗಾಗಿ ಅಮೇರಿಕಾ ಟೆಕ್ಸಾಸ್‌ಗೆ ಹೋಗಲು ಸಾಧ್ಯವಾಗದೆ ರೋಗಿ ಮರಣ ಹೊಂದುತ್ತಾನೆ.
4. ಈ ಘಟನೆ ಅವರಿಗೆ ವ್ಯದ್ಯಶಾಲೆಗಳ ಗುಂಪು ಹುಟ್ಟುಹಾಕಲು ಪ್ರೇರಣೆಯಾಯಿತು.

### 2. ನರೇಶ ಗೋಯಲ್

1. ಜೆಟ್ ವಾಯುಮಾರ್ಗಗಳನ್ನು ಹುಟ್ಟುಹಾಕಿದವರು ಮತ್ತು ಅದರ ಅಧ್ಯಕ್ಷರಾಗಿದ್ದಾರೆ.
2. ಭಾರತದ ಅತಿದೊಡ್ಡ ಆಂತರಿಕ ವಾಯು ಮಾರ್ಗವಾಗಿದೆ.

### 3. ನಾರಾಯಣ ಮೂರ್ತಿ

1. 1999ರಲ್ಲಿ ಭಾರತದಲ್ಲಿ ಇನ್ಫೋಸಿಸ್ ತಂತ್ರಜ್ಞಾನ ನಿಗಮವನ್ನು ಪ್ರಾರಂಭಿಸಿದರು
2. NASADQ ನಲ್ಲಿ ನೊಂದಾಯಿತಗೊಂಡ ಭಾರತದ ಪ್ರಪ್ರಥಮ ತಂತ್ರಜ್ಞಾನದ ಸಂಸ್ಥೆಯು

### 4. ವರ್ಗೀಸ್ ಕುರಿಯನ್

1. "ಬಿಳಿಕ್ರಾಂತಿಯ ಪಿತಾಮಹ" ಎನ್ನವರು
2. ಲಕ್ಷಾಂತರ ಲೀಟರ್ ಹಾಲಿನ ಹೊಳೆ ಹರಿಸಿದ್ದಾರೆ
3. 'ಆಮುಲ್' ಹಾಲು ಮತ್ತು ಹಾಲಿನ ಉತ್ಪನ್ನಗಳ ತಯಾರಿಕೆ ಇವರ ಸಾಧನೆ
4. ಗುಜರಾತಿನ ಕೈರಾ ಜಿಲ್ಲೆಯ 'ಆನಂದ್' ಎಂಬಲ್ಲಿ ಹೈನುಗಾರಿಕೆಯನ್ನು ಪ್ರಾರಂಭಿಸಿದರು

### 5. ಧೀರುಬಾಯಿ ಅಂಬಾನಿ

1. ಭಾರತದ ಸಮ್ಮೇಳನ ಸಂಸ್ಥೆಯನ್ನು ಹುಟ್ಟುಹಾಕಿದರು
2. ಮೌಂಟ್‌ಗಿರನಾರ್ ಎಂಬಲ್ಲಿ ವಾರಾಂತ್ಯದಲ್ಲಿ ಭಜನೆಗಳ ಪುಸ್ತಕಗಳನ್ನು ಮಾರುವುದರ ಮೂಲಕ ಉದ್ಯಮವನ್ನು ಪ್ರಾರಂಭಿಸಿದವರು
3. 1958 ರಲ್ಲಿ ಐವತ್ತು ಸಾವಿರ ರೂಪಾಯಿಗಳೊಂದಿಗೆ ಒಟ್ಟೆ ವ್ಯಾಪಾರದ ಕಂಪನಿಯೊಂದನ್ನು ಪ್ರಾರಂಭಿಸಿದರು.
4. ಇವರು ಸ್ಥಾಪಿಸಿರುವ 'ರಿಲಯನ್ಸ್' ಸಂಸ್ಥೆ ಪ್ರಪಂಚದಲ್ಲೇ ಮುಖ್ಯ ಉದ್ಯಮ

### 6. ಅಜೀಮ್ ಪ್ರೇಮಜಿ

1. ವಿಪ್ರೋ ತಂತ್ರಜ್ಞಾನ ಸಂಸ್ಥೆಯ ಅಧ್ಯಕ್ಷರು.
2. ಈ ಸಂಸ್ಥೆಯು ಸಾಫ್ಟವೇರ್ ದಿಸೆಯಲ್ಲಿ ಭಾರತದಲ್ಲೇ ಅತ್ಯಂತ ದೊಡ್ಡ ಸಂಸ್ಥೆ
3. ವಿಪ್ರೋ ತಾಂತ್ರಿಕ ಸಂಸ್ಥೆಯು ಸಂಶೋಧನೆ ಮತ್ತು ಅಭಿವೃದ್ಧಿ ಸೇವೆಯಲ್ಲಿ ಅತ್ಯಂತ ದೊಡ್ಡ ಸ್ವಾಯತ್ತ ಸಂಸ್ಥೆಯಾಗಿದೆ.

### 7. ಏಕ್ತಾಕಪೂರ್

1. ಭಾರತದ ದೂರದರ್ಶನ ಕ್ಷೇತ್ರದಲ್ಲಿ "ಅಧಿಪತ್ಯ ಸಾಧಿಸಿದ ರಾಣಿ' ಯೆಂದೇ ಹೆಸರು ಮಾಡಿದ್ದಾರೆ.
2. ಬಾಲಾಜಿ ದೂರದರ್ಶನ ಚಿತ್ರ ಹುಟ್ಟುಹಾಕಿದರು
3. 2001 ರಲ್ಲಿ ಇವರಿಗೆ ವರ್ಷದ ಶ್ರೇಷ್ಠ ಉದ್ಯಮಿಯ ಪ್ರಶಸ್ತಿಯನ್ನು **(Erust Young)** ಸಂಸ್ಥೆ ನೀಡಿ ಗೌರವಿಸಿದೆ.
4. ತಮ್ಮ 19ನೇ ವರ್ಷಕ್ಕೆ ದೂರದರ್ಶನ ಅನುಕ್ರಮ ಪ್ರಸಾರದ ರೂವಾರಿಯಾದರು.

### 8. ಕಿರಣ್ ಮುಜುಮ್‌ದಾರ್ ಷಾ

1. ಇವರು 'ಬಯೋಕಾನ್' ನಿಗಮದ ಅಧ್ಯಕ್ಷರು
2. ಈ ನಿಗವು ಭಾರತದಲ್ಲಿ ಜೀವವಿಜ್ಞಾನ ತಂತ್ರಜ್ಞಾನದ ಅತಿ ದೊಡ್ಡ ಸಂಸ್ಥೆಯಾಗಿದೆ
3. 1978 ರಲ್ಲಿ ಒಂದು ಸಣ್ಣ ಬಾಡಿಗೆಯ ಮೋಟಾರು ನಿಲ್ಲಿಸುವ ಜಾಗದಲ್ಲಿ ಪ್ರಾರಂಭವಾಯಿತು.

| ಕೈಗಾರಿಕಾ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳು | ಭಾರತದ ಕೈಗಾರಿಕಾ ವಲಯಗಳು/ಪ್ರದೇಶಗಳು |
|---|---|
| 1. ಕಚ್ಚಾ ವಸ್ತುಗಳ ಲಭ್ಯತೆ<br>2. ಶಕ್ತಿ ಸಂಪನ್ಮೂಲಗಳ ಲಭ್ಯತೆ<br>3. ಸಾರಿಗೆ ಸಂಪರ್ಕ ವ್ಯವಸ್ಥೆ<br>4. ಮಾರುಕಟ್ಟೆ ಸೌಲಭ್ಯ<br>5. ಬಂಡವಾಳ<br>6. ಕಾರ್ಮಿಕರ ಲಭ್ಯತೆ<br>7. ಸೂಕ್ತ ವಾಯುಗುಣ<br>8. ಸರ್ಕಾರದ ನೀತಿ | 1. ಹೂಗ್ಲಿ– ಕೊಲ್ಕತಾ ಪ್ರದೇಶ<br>2. ಮುಂಬಯಿ–ಪುಣೆ ಪ್ರದೇಶ<br>3. ಅಹ್ಮದಾಬಾದ್ –ವಡೋದರ ಪ್ರದೇಶ<br>4. ಮಧುರೈ – ಕೊಯಮತ್ತೂರು –ಬೆಂಗಳೂರು<br>5. ಛೋಟಾನಾಗಪುರ ಪ್ರಸ್ಥಭೂಮಿ<br>6. ದೆಹಲಿ –ಮೀರತ್ ಪ್ರದೇಶ<br>7. ವಿಶಾಖಪಟ್ಟಣ –ಗುಂಟೂರು ಪ್ರದೇಶ<br>8. ಕೊಲ್ಲಂ –ತಿರುವನಂತಪುರ ಪ್ರದೇಶ |

**ಸಂಘಟಿತ ಕೆಲಸಗಾರರು ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸ**

| ಸಂಘಟಿತ ಕೆಲಸಗಾರರು | ಅಸಂಘಟಿತ ಕೆಲಸಗಾರರ |
|---|---|
| 1. ಕಾಯ್ದೆಗೆ ಬದ್ದವಾಗಿ ಕೆಲಸ ಮಾಡುವರು<br>2. ನಿಗದಿತ ಕಾರ್ಯ ಕ್ಷೇತ್ರದಲ್ಲಿ ಕೆಲಸ<br>3. ವಿಶೇಷ ತರಬೇತಿ, ಶೈಕ್ಷಣಿಕ ಅರ್ಹತೆ ಹೊಂದಿರುತ್ತಾರೆ.<br>3. ಕೆಲಸದ ಭದ್ರತೆ ನಿಗದಿತ ವೇತನ, ಭತ್ಯೆ, ವೈದ್ಯಕೀಯ ಸೌಲಭ್ಯ ಹೊಂದಿರುತ್ತಾರೆ<br>4. ಉದಾ: – ಸರ್ಕಾರಿ ಇಲಾಖೆಗಳು, ಕೈಗಾರಿಕೆ, ಖಾಸಗಿ ಕಂಪನಿ | 1. ಯಾವುದೇ ಕಾಯ್ದೆ ಕಾನೂನುಗಳು ಇರುವುದಿಲ್ಲ<br>2. ವಿವಿಧ ಕಸುಬುಗಳಲ್ಲಿ ತೊಡಗಿರುತ್ತಾರೆ<br>3. ಯಾವುದೇ ತರಬೇತಿ, ಶೈಕ್ಷಣಿಕ ಅರ್ಹತೆ ಹೊಂದಿರುವುದಿಲ್ಲ<br>4. ಕೆಲಸದ ಭದ್ರತೆ ನಿಗದಿತ ವೇತನ, ಭತ್ಯೆ, ವೈದ್ಯಕೀಯ ಸೌಲಭ್ಯ ಇರುವುದಿಲ್ಲ<br>5. ಉದಾ: – ಮನೆಗೆಲಸ, ಗೃಹ ನಿರ್ಮಾಣ, ವಾಹನ ರಿಪೇರಿ ಮಾಡುವವರು. |

**ಜಮೀನ್ದಾರಿ ಪದ್ದತಿ ಮತ್ತು ರೈತವಾರಿ ಪದ್ಧತಿ ಇವಗಳ ನಡುವಿನ ವ್ಯತ್ಯಾಸ**

| ಜಮೀನ್ದಾರಿ ಪದ್ದತಿ | ರೈತವಾರಿ ಪದ್ಧತಿ |
|---|---|
| 1. ಲಾರ್ಡ ಕಾರ್ನವಾಲೀಸ್ ಜಾರಿಗೆ ತಂದನು<br>2. ಬಂಗಾಳ, ಬಿಹಾರ, ಓಡಿಸ್ಸಾದಲ್ಲಿ ಜಾರಿಗೆ ತಂದನು<br>3. ಜಮೀನ್ದಾರರು ರೈತರಿಂದ ಕಂದಾಯ ವಸೂಲಿ ಮಾಡಿ ಬ್ರಿಟಿಷರಿಗೆ ಸಲ್ಲಿಸುತ್ತಿದ್ದರು<br>4. ಜಮೀನಿನ ಪ್ರಮಾಣಕ್ಕೆ ಅನುಗುಣವಾಗಿ ಕಂದಾಯ ನಿಗದಿ | 1. ಥಾಮಸ್ ಮನ್ರೋ ಜಾರಿಗೆ ತಂದನು<br>2. ರೈತರೆ ನೇರವಾಗಿ ಸರಕಾರಕ್ಕೆ ಕಂದಾಯ ನೀಡಬೇಕಾಗಿತ್ತು<br>3. ಭೂ ಒಡೆತನದ ಹಕ್ಕು ರೈತರು ಹೊಂದಿದರು<br>4. ಭೂಮಿಯ ಪ್ರಮಾಣಕ್ಕೆ ಅನುಗುಣ ಕಂದಾಯ |

**ಕಪ್ಪು ಮಣ್ಣು ಮತ್ತು ಕೆಂಪು ಮಣ್ಣು ಇವುಗಳ ನಡುವಿನ ವ್ಯತ್ಯಾಸ**

| ಕಪ್ಪು ಮಣ್ಣು | ಕೆಂಪು ಮಣ್ಣು |
|---|---|
| 1. ಅಗ್ನಿ ಶಿಲೆಗಳ ಶಿಥಿಲಿಕರಣದಿಂದ ಉತ್ಪತಿ<br>2. ರೀಗರ್ ಮಣ್ಣು ಎನ್ನುವರು<br>3. ಒಣ ಬೇಸಾಯಕ್ಕೆ ಸೂಕ್ತ | 1. ಸ್ಪಟಿಕ ಶಿಲೆಗಳ ಶಿಥಿಲಿಕರಣದಿಂದ ಉತ್ಪತಿ<br>2. ಪರ್ಯಾಯ ಪ್ರಸ್ಥಭೂಮಿಯಲ್ಲಿ ಹರಡಿದೆ<br>3. ಕಬ್ಬಿಣದ ಆಕ್ಸೈಡ್ ಹೆಚ್ಚಾಗಿರುವುದರಿಂದ ಕೆಂಪು ಬಣ್ಣ ಹೊಂದಿದೆ. |

| | |
|---|---|
| ಭಾರತೀಯ ರಿಸರ್ವ ಬ್ಯಾಂಕಿನ ಕಾರ್ಯಗಳು | ಭಾರತದಲ್ಲಿ  ಬಳಸಲಾಗುತ್ತಿರುವ ಹಣದ ಪೂರೈಕೆಯ ವಿವಿಧ ಪರಿಕಲ್ಪನೆಗಳನ್ನು ವಿವರಿಸಿ. |
| 1. ನೋಟು ಚಲಾವಣೆಯ ಏಕಸ್ವಾಮ್ಯ<br>2. ಸರ್ಕಾರದ ಬ್ಯಾಂಕು<br>3. ಬ್ಯಾಂಕುಗಳ ಬ್ಯಾಂಕು<br>4. ರಾಷ್ಟ್ರೀಯ ಸಂದಾಯ ಕೇಂದ್ರದ ಸೇವೆ<br>5. ಸಾಲದ  ನಿಯಂತ್ರಕ<br>6. ವಿದೇಶಿ ವಿನಿಮಯ ಸಂಗ್ರಹದ ಮೇಲ್ವಿಚಾರಕ<br>7. ಬ್ಯಾಂಕಿಗ್ ಹವ್ಯಾಸದ ಅಭಿವೃದ್ಧಿ | **1. M1** = ಕರೆನ್ಸಿ ನೋಟುಗಳು,ನಾಣ್ಯಗಳು,+ ವಾಣಿಜ್ಯ ಬ್ಯಾಂಕಗಳಲ್ಲಿನ ಬೇಡಿಕೆ ಠೇವಣಿಗಳು.<br>**2. M2= M1+** ಅಂಚೆ ಕಛೇರಿಗಳಲ್ಲಿರುವ ಉಳಿತಾಯ ಠೇವಣಿಗಳು<br>**3. M3 = M1+** ವಾಣಿಜ್ಯ ಬ್ಯಾಂಕುಗಳಲ್ಲಿನ ಮುದ್ದತಿ ಠೇವಣಿಗಳು<br>**4. M4 =M3+**ಅಂಚೆ ಕಚೇರಿಗಳಲ್ಲಿನ ಒಟ್ಟು ಠೇವಣಿಗಳು |
| ಹಣದ ಕಾರ್ಯಗಳು | ಹಣದ ಪ್ರಕಾರಗಳು |
| 1. ಪ್ರಾಥಮಿಕ ಕಾರ್ಯಗಳು<br>* ವಿನಿಮಿಯ ಹಾಗೂ ಪಾವತಿಯ ಮಾಧ್ಯಮ<br>* ಮೌಲ್ಯದ ಮಾಪನ<br>2. ಪೂರಕ ಕಾರ್ಯಗಳು<br>* ವಿಳಂಬಿತ ಸಂದಾಯದ ಕಾರ್ಯ<br>* ಮೌಲ್ಯದ ಸಂಗ್ರಾಹಕ<br>* ಮೌಲ್ಯದ ಮರ್ಗಾವಣೆ | 1. ವಸ್ತು ರೂಪದ ಹಣ<br>2. ಲೋಹದ ಹಣ<br>3. ಕಾಗದದ ಹಣ<br>4. ಬ್ಯಾಂಕ ಹಣ<br>5. ಪ್ಲಾಸ್ಟಿಕ್ ಹಣ |
| ಭಾರತೀಯ ರಿಸರ್ವ ಬ್ಯಾಂಕ್ ಬಳಸುವ ಸಾಲ ನಿಯಂತ್ರಣ ಕ್ರಮಗಳನ್ನು ವಿವರಿಸಿ. | ಕೇಂದ್ರ ಸರ್ಕಾರದ ತೆರಿಗೆಯೇತರ ಆದಾಯದ ಮೂಲಗಳಾವುವು? |
| 1. ಪರಿಮಾಣಾತ್ಮಕ ಸಾಲ ನಿಯಂತ್ರಣ ಕ್ರಮ<br>* ಬ್ಯಾಂಕುದರ : ರೆಪೊ ದರ ಮತ್ತು ರಿವರ್ಸ ರಿಪೊ ದರ<br>* ಮುಕ್ತ ಮಾರುಕಟೆ ಕಾರ್ಯಾಚರಣೆ<br>* ಮೀಸಲು ಅನುಪಾತವನ್ನು ಏರಿಳಿತಗೊಳಿಸುವುದು<br>2. ಗುಣಾತ್ಮಕ ಸಾಲ ನಿಯಂತ್ರಣ ಕ್ರಮ:<br>* ಮಾರ್ಜಿನ ಪ್ರಮಾಣದ ಬದಲಾವಣೆ<br>* ಸಾಲದ ಪಡಿತರ ನಿಗಧಿ<br>* ನೈತಿಕ ಒತ್ತಡ<br>* ನೇರ ಕ್ರಮ | 1. ಭಾರತೀಯ ರಿಸರ್ವ ಬ್ಯಾಂಕಿನ ನಿವ್ವಳ ಆದಾಯ<br>2. ಭಾರತೀಯ ರೈಲ್ವೆಗಳಿಸುವ ನಿವ್ವಳ ಲಾಭ<br>3. ಅಂಚೆ ಮತ್ತು ದೂರವಾಣಿ ಸೇವೆಗಳಿಂದ ಬರುವ ಆದಾಯ<br>4. ಸಾರ್ವಜನಿಕ ಉದ್ಯಮಗಳು ಗಳಿಸುವ ಲಾಭ<br>5. ನಾಣ್ಯ ಮತ್ತು ಟಂಕಸಾಲೆಯಿಂದ ಬರುವ ಆದಾಯ<br>6. ವಿವಿಧ ರೀತಿಯ ಶುಲ್ಕಗಳು ಮತ್ತು ದಂಡಗಳು |

| ಸಾರ್ವಜನಿಕ ಹಣಕಾಸಿನ ಮಹತ್ವವನ್ನು ತಿಳಿಸಿ. | |
|---|---|
| 1. ಸರ್ಕಾರವು ತನ್ನ ಕೋಶಿಯ ನೀತಿ ರಚಿಸಲು ಸಹಕಾರಿ<br>2. ನೈಸರ್ಗಿಕ ಹಾಗೂ ಮಾನವ ಸಂಪನ್ಮೂಲದ ಸದ್ಬಳಕೆ<br>3. ಆದಾಯದ ಅಸಮಾನ ಹಂಚಿಕೆಯ ನಿವಾರಣೆ<br>4. ಬಡತನ ನಿರುದ್ಯೋಗ ನಿರ್ಮೂಲನೆ | 5. ಬೆಲೆಗಳಲ್ಲಿನ ಸ್ಥಿರತೆ<br>6. ಆರ್ಥಿಕ ಸ್ಥಿರತೆಗೆ ಸಹಕಾರಿ |

| ಕೊರತೆಯ ಹಣಕಾಸು ಎಂದರೇನು? ಅದರ ನಾಲ್ಕು ವಿಧಗಳನ್ನು ಹೆಸರಿಸಿ. | ಸಾರ್ವಜನಿಕ ವೆಚ್ಚದ ಏರಿಕೆಗೆ ಕಾರಣಗಳು |
|---|---|
| ಅರ್ಥ : ಸರ್ಕಾರದ ಆಯ –ವ್ಯಯ ಪತ್ರದ ಕಾರ್ಯಾಚರಣೆ ಮೂಲಕ ಅರ್ಥ ವ್ಯವಸ್ಥೆಯ ನಿವ್ವಳ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವ ಕ್ರಮವೇ ಕೊರತೆ ಹಣಕಾಸು ಎನ್ನುವರು<br>1. ವಿತ್ತೀಯ ಕೊರತೆ<br>2. ಆಯ–ವ್ಯಯ ಕೊರತೆ<br>3. ಕಂದಾಯ ಕೊರತೆ<br>4. ಪ್ರಾಥಮಿಕ ಕೊರತೆ | 1. ಆರ್ಥಿಕ ಬೆಳವಣಿಗೆಯನ್ನು ತೀವ್ರಗೊಳಿಸುತ್ತಿರುವುದು.<br>2. ಉದ್ಯಮ, ವ್ಯವಹಾರ ಮತ್ತು ವಾಣಿಜ್ಯಕ್ಕೆ ಪ್ರೋತ್ಸಾಹ ನೀಡುತ್ತಿರುವುದು.<br>3. ಕೃಷಿ ಗ್ರಾಮ್ಬಿಣಾಭಿವೃದ್ಧಿಗೆ ಪ್ರೋತ್ಸಾಹ ನೀಡುತ್ತಿರುವುದು.<br>4. ಸಮತೋಲನಕರ ಪ್ರಾದೇಶಿಕ ಬೆಳೆವಣಿಗೆಗೆ ಪ್ರೋತ್ಸಾಹ<br>5. ಸಂಪೂರ್ಣ ಉದ್ಯೋಗದ ಸಾಧನೆಗಾಗಿ<br>6. ಸಮಾಜಿಕ ಕಲ್ಯಾಣ ಸಾಧಿಸುವುದು |

**ಪ್ರತ್ಯಕ್ಷ ತೆರಿಗೆಗಳು ಮತ್ತು ಪರೋಕ್ಷ ತೆರಿಗೆಗಳ ನಡುವಿನ ವ್ಯತ್ಯಾಸ ಬರೆಯಿರಿ.**

| ಪ್ರತ್ಯಕ್ಷ ತೆರಿಗೆಗಳು | ಪರೋಕ್ಷ ತೆರಿಗೆಗಳು |
|---|---|
| 1. ಅರ್ಥ : ಸರ್ಕಾರ ಯಾರ ಮೇಲೆ ತೆರಿಗೆ ವಿಧಿಸುತ್ತದೆಯೋ ಅವರೆ ಆ ತೆರಿಗೆ ಪಾವತಿಸಿದರೆ ಅದನ್ನು ಪ್ರತ್ಯಕ್ಷ ತೆರಿಗೆ ಎನ್ನುವರು.<br>2. ವ್ಯಕ್ತಿ ಮತ್ತು ಸಂಸ್ಥೆ ಮೇಲೆ ವಿಧಿಸಲಾಗುತ್ತದೆ<br>3. ಉದಾ : * ವರಮಾನ ತೆರಿಗೆ<br>* ಕಂಪನಿ ತೆರಿಗೆ<br>* ಸಂಪತ್ತಿನ ತೆರಿಗೆ<br>* ಸ್ಟಾಂಪ ಶುಲ್ಕ | ಅರ್ಥ : ಸರ್ಕಾರವು ವಿಧಿಸುವ ತೆರಿಗೆಯನ್ನು ಇತರರ ಮೇಲೆ ವರ್ಗಾಯಿಸಲು ಸಾಧ್ಯವಿದ್ದರೆ ಅಂತಹ ತೆರಿಗೆಯನ್ನು ಪರೋಕ್ಷ ತೆರಿಗೆ ಎನ್ನುವರು<br>2. ಸರಕು ಮತ್ತು ಸೇವೆಗಳ ಮೇಲೆ ವಿಧಿಸಲಾಗುತ್ತದೆ.<br>3. ಉದಾ : * ಕೇಂದ್ರ ಅಬಕಾರಿ ತೆರಿಗೆ<br>* ಮೌಲ್ಯ ವರ್ಧಿತ ತೆರಿಗೆ<br>* ಆಮದು ಮತ್ತು ರಫ್ತು ಸುಂಕಗಳು<br>* ಸೇವ ತರಿಗೆ |

| ಜಾಗತೀಕರಣವು ವಿಶ್ವದ ಆರ್ಥಿಕ ಚಲನೆಗೆ ಹೇಗೆ ಸಹಕಾರಿಯಾಗಿದೆ | ಜಾಗತೀಕರಣದ ಲಕ್ಷಣಗಳಾವುವು? |
|---|---|
| 1. ಸರಕು ಸೇವೆಗಳನ್ನು ಒದಗಿಸುತ್ತದೆ<br>2. ದೇಶದ ಒಟ್ಟು ರಾಷ್ಟ್ರೀಯ ಉತ್ಪನ್ನ ಹೆಚ್ಚಿಸುತ್ತದೆ.<br>3. ಜನರ ವರಮಾನ ಹೆಚ್ಚಿಸುತ್ತದೆ<br>4. ಉತ್ಪಾದನೆಯಲ್ಲಿ ವಿಶೇಷ ಪರಿಣತಿಗೆ ಅವಕಾಶ ನೀಡುತ್ತದೆ. | 1. ಜಾಗತೀಕರಣವು ತೀವ್ರವಾಗಿ ಅಂತರಾಷ್ಟ್ರೀಯ ವ್ಯಾಪಾರವನ್ನು ಹೆಚ್ಚಿಸುತ್ತದೆ<br>2. ಅಂತರಾಷ್ಟ್ರೀಯ ಸಾಂಸ್ಕೃತಿಕ ವಿನಿಮಯಗಳನ್ನು ಹೆಚ್ಚು ಮಾಡುತ್ತದೆ.<br>3. ದೇಶಗಳ ನಡುವೆ ವಲಸೆ ಹೋಗುವುದನ್ನು ಹೆಚ್ಚಿಸುತ್ತದೆ.<br>4. ಮಾಹಿತಿ ಮತ್ತು ತಾಂತ್ರಿಕತೆಯ ವಿನಿಮಯ |

| ಜಾಗತೀಕರಣದ ಅನಕೂಲಗಳನ್ನು ತಿಳಿಸಿ | ಜಾಗತೀಕರಣದ ಅನಾನುಕೂಲಗಳನ್ನು ತಿಳಿಸಿ |
|---|---|
| 1. ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುತ್ತದೆ<br>2. ಜನರ ಜೀವನಮಟ್ಟ ಹೆಚ್ಚಿಸುತ್ತದೆ<br>3. ದೇಶದ ವರಮಾನ ಹೆಚ್ಚಿಸುತ್ತದೆ<br>4. ರಾಷ್ಟ್ರೀಯ ಉತ್ಪನ್ನ (ಜಿ.ಡಿ.ಪಿ) ಹೆಚ್ಚಿಸುತ್ತದೆ | 1. ಭಯೋತ್ಪಾದನೆ ಮತ್ತು ಪಾತಕಿಗಳಿಗೆ ಸಹಾಯ<br>2. ಗುಲಾಮಗಿರಿ & ಬಾಲ ಕಾರ್ಮಿಕ ಪದ್ಧತಿ ಉಂಟಾಗುತ್ತದೆ<br>3. ಮಾರಣಾಂತಿಕ ರೋಗಗಳು ಹರಡುತ್ತವೆ.<br>4. ಪರಿಸರದ ಅವನತಿಗೆ ಕಾರಣವಾಗುತ್ತದೆ. |

| | |
|---|---|
| ವಿಶ್ವ ವ್ಯಾಪಾರ ಸಂಘಟನೆಯ ಉದ್ದೇಶಗಳಾವುವು? | ವಿಶ್ವ ವ್ಯಾಪಾರ ಸಂಘಟನೆಯ ಗುರಿಗಳಾವುವು? |
| 1. ವಿಶ್ವಾದ್ಯಂತ ಮುಕ್ತ ವ್ಯಾಪಾರಕ್ಕೆ ಒತ್ತು ನೀಡುವುದು.<br>2. ವ್ಯಾಪಾರ ಸಂಬಂಧಿ ಭಿನ್ನಾಭಿಪ್ರಾಯಗಳನ್ನು ಬಗೆಹರಿಸುವುದು.<br>3. ಅಂತರಾಷ್ಟ್ರೀಯ ವ್ಯಾಪಾರದಲ್ಲಿ ತೆರಿಗೆಗಳನ್ನು ಕಡಿಮೆ ಮಾಡುವುದು.<br>4. ವಿಶ್ವದ ಸಂಪನ್ಮೂಲಗಳ ಸಮರ್ಪಕ ಬಳಕೆ | 1. ಸದಸ್ಯ ರಾಷ್ಟ್ರಗಳ ಜೀವನಮಟ್ಟ ಹೆಚ್ಚಿಸುವುದು.<br>2. ಸದಸ್ಯ ರಾಷ್ಟ್ರಗಳ ಆರ್ಥಿಕ ಮಟ್ಟವನ್ನು ಹೆಚ್ಚಿಸುವುದು.<br>3. ಉದ್ಯೋಗ ಅವಕಾಶಗಳನ್ನು ಕಲ್ಪಿಸುವುದು.<br>4. ಶಾಂತಿ ಮತ್ತು ಸ್ಥಿರತೆ ಕಾಪಾಡಲು ಸಹಕರಿಸುವುದು. |
| ಜಾಗತೀಕರಣವು ಪರಿಸರದ ಅವನತಿಗೆ ಹೇಗೆ ಕಾರಣವಾಗಿದೆ? | ಗ್ರಾಹಕರು ಅನುಭವಿಸುತ್ತಿರುವ ಸಂಕಷ್ಟಗಳೇನು? |
| 1. ಪರಿಸರ ಮಾಲಿನ್ಯ<br>2. ಹಸಿರು ಮನೆ ಪರಿಣಾಮ<br>3. ಜಾಗತಿಕ ತಾಪಮಾನದ ಏರಿಕೆ<br>4. ಸಂಪನ್ಮೂಲಗಳು ಬೇಗ ಅಂತ್ಯಗೊಳ್ಳುತ್ತವೆ. | 1. ಸರಕುಗಳಲ್ಲಿನ ಕಲಬೆರಕೆ<br>2. ಬೆಲೆ ಏರಿಕೆ<br>3. ತೂಕದಲ್ಲಿ ಮೋಸ<br>4. ಕಳಪೆ ಗುಣಮಟ್ಟದ ವಸ್ತುಗಳು |
| ಬಳಕೆದಾರರ ಶೋಷಣೆಗೆ ಕಾರಣಗಳಾವುವು? | ಗ್ರಾಹಕ ಸಂರಕ್ಷಣಾ ಕಾಯ್ದೆಯ ಮುಖ್ಯವಾದ ಉದ್ದೇಶಗಳನ್ನು ತಿಳಿಸಿ |
| 1. ಮಧ್ಯವರ್ತಿಗಳ ಪ್ರವೇಶ<br>2. ಅಧಿಕ ಲಾಭ ಬಡುಕುತನ<br>3. ಮಾರುಕಟ್ಟೆಯಲ್ಲಿ ಅನ್ಯೆತಿಕ ವ್ಯಾಪಾರದ ವಿಧಾನಗಳು | 1. ಅಪಾಯಕಾರಿ ವಸ್ತಗಳ ಉತ್ಪಾದನೆ ಹಾಗೂ ಮಾರಾಟವನ್ನು ತಡೆಯುವುದು.<br>2. ಮಾರುಕಟ್ಟೆಯಲ್ಲಿ ಅನ್ಯೆತಿಕ ವ್ಯಾಪಾರದ ನಿಯಂತ್ರಣ<br>3. ಗುಣಮಟ್ಟದ ತೂಕ, ಅಳತೆ, ಬೆಲೆಗಳ ಮೇಲ್ವಿಚಾರಣೆ<br>4. ಗ್ರಾಹಕರ ಹಿತರಕ್ಷಣೆಗೆ ಆದ್ಯತೆ |
| ಗ್ರಾಹಕ ಸಂರಕ್ಷಣಾ ಪರಿಷತ್ತಿನ ಮುಖ್ಯ ಕಾರ್ಯವೇನು? | ಮೂರು ಹಂತದ ಗ್ರಾಹಕ ನ್ಯಾಯಾಲಯಗಳನ್ನು ತಿಳಿಸಿ |
| 1. ಮಾಹಿತಿ ಪಡೆಯುವ ಹಕ್ಕು<br>2. ವಸ್ತುಗಳ ಆಯ್ಕೆಯ ಹಕ್ಕು<br>3. ವಸ್ತುಗಳ ಬಗ್ಗೆ ಆಲಿಸುವ ಹಕ್ಕು<br>4. ಶೋಷಣೆಯ ವಿರುದ್ಧ ಪರಿಹಾರ ಕೇಳುವ ಹಕ್ಕು<br>5. ಗ್ರಾಹಕ ಶಿಕ್ಷಣದ ಹಕ್ಕು | 1. ಜಿಲ್ಲಾ ಗ್ರಾಹಕರ ವೇದಿಕೆ<br>2. ರಾಜ್ಯ ಗ್ರಾಹಕರ ಆಯೋಗ<br>3. ರಾಷ್ಟ್ರೀಯ ಗ್ರಾಹಕರ ಆಯೋಗ<br><br>ಗ್ರಾಹಕ ನ್ಯಾಯಾಲಯಕ್ಕೆ ಸಲ್ಲಿಸುವ ದೂರನಲ್ಲಿ ಇರಬೇಕಾದ ಮಾಹಿತಿಗಳು ಯಾವುವು? |
| 1. ಕೈಬರಹ ದೂರಿನ ಅರ್ಜಿಯನ್ನು ಕೋರ್ಟಿಗೆ ಸಲ್ಲಿಸಬೇಕು<br>2. ಅರ್ಜಿಯಲ್ಲಿ ವಿಳಾಸ ಮತ್ತು ದೂರವಾಣಿ ಸಂಖ್ಯೆ ಬರೆಯಬೇಕು | 3. ನಷ್ಟ ಉಂಟುಮಾಡಿರುವ ಸರಕಿನ ವಿವರ ಮೊತ್ತ ಬರೆಯಬೇಕು<br>4. ಖರೀದಿ ಬಿಲ್ಲನ್ನು ಲಗ್ಗತ್ತಿಸಿರಬೇಕು<br>5. ವಕೀಲರ ಅವಶ್ಯಕತೆಯಿಲ್ಲದೇ ತಾವೆ ವಾದಮಂಡಿಸಬಹುದು |

| ಭಾರತದ ಜನಸಂಖ್ಯಾ ಬೆಳವಣಿಗೆಗೆ ಪ್ರಮುಖ ಕಾರಣಗಳಾವುವು? | ಜನಸಂಖ್ಯೆ ಬೆಳವಣಿಗೆಯಿಂದಾಗುವ ಪರಿಣಾಮಗಳೇನು |
|---|---|
| 1. ಅಧಿಕ ಜನನ ದರ<br>2. ಕಡಿಮೆ ಮರಣ ದರ<br>3. ವಿವಾಹ ಸಾರ್ವತ್ರಿಕವಾಗಿರುವುದು.<br>4. ಗಂಡು ಮಗು ಬೇಕೆಂಬ ಬಯಕೆ | 1. ನಿರುದ್ಯೋಗ ಸಮಸ್ಯೆ<br>2. ಆಹಾರ ಮತ್ತು ಪೌಷ್ಟಿಕಾಂಶದ ಕೊರತೆ<br>3. ನಾಗರೀಕ ಸೌಲಭ್ಯಗಳ ಕೊರತೆ<br>4. ಕಡಿಮೆ ತಲಾ ಆದಾಯ |
| ಭಾರತದ ಜನಸಂಖ್ಯಾ ಹಂಚಿಕೆಯನ್ನು ನಿಯಂತ್ರಿಸುವ ಅಂಶಗಳಾವುವು? | ಕಡಿಮೆ ಜನಸಾಂದ್ರತೆಗೆ ಕಾರಣಗಳಾವುವು? |
| 1. ಮೇಲ್ಮೈ ಲಕ್ಷಣಗಳು<br>2. ವಾಯುಗುಣ<br>3. ಮಣ್ಣು<br>4. ಸಂಪನ್ಮೂಲಗಳು<br>5. ಕೈಗಾರಿಕೆ | 1. ಪ್ರವಾಹಗಳು<br>2. ಭೂಕಂಪಗಳು<br>3. ಮರುಭೂಮಿ ಪ್ರದೇಶಗಳು<br>4. ಚಂಡಮಾರುತಗಳು<br>5. ಇತರೆ ನೈಸರ್ಗಿಕ ವಿಕೋಪಗಳು |
| ಜನಸಂಖ್ಯೆ ಬೆಳೆವಣಿಗೆಯ ನಿಯಂತ್ರಣ ಕ್ರಮಗಳಾವುವು? | ಭೂಕಂಪ /ಪ್ರವಾಹ/ಚಂಡುಮಾರುತ/ಕಡಲ ಕೊರತದ ಪರಿಣಾಮಗಳೇನು |
| 1. ಕುಟುಂಬ ಯೋಜನೆ<br>2. ಮಹಿಳಾ ಕಲ್ಯಾಣ ಯೋಜನೆ<br>3. ಶಿಶು ಮರಣ ತಡೆಗಟ್ಟುವುದು<br>4. ಸಾಮಾಜಿಕ ಜಾಗೃತಿ | 1. ಆಪಾರ ಸಾವು ನೋವು ಉಂಟಾಗುವುದು.<br>2. ಬೆಳೆಗಳು ನಾಶವಾಗುವುವು<br>3. ಸಾರಗೆ ಸಂಪರ್ಕ ಅಸ್ತವ್ಯಸ್ತವಾಗುವುದು<br>4. ಜೀವ ಹಾನಿ ಉಂಟಾಗುವುದು |
| ಭಾರತ ಸ್ವಾತಂತ್ರ್ಯಗೊಂಡ ನಂತರ ಎದುರಿಸಿದ ಸಮಸ್ಯೆಗಳಾವುವು | ನಿರಾಶ್ರಿತರ ಸಮಸ್ಯೆಯನ್ನು ದೇಶವು ಹೇಗೆ ಎದುರಿಸಿತು? |
| 1. ನಿರಾಶ್ರಿತರ ಸಮಸ್ಯೆ<br>2. ಮತೀಯ ಗಲಭೆಗಳು<br>3. ದೇಶಿಯ ಸಂಸ್ಥಾನಗಳ ವಿಲೀನೀಕರಣ<br>4. ಭಾಷಾವಾರು ಪ್ರಾಂತ್ಯಗಳ ರಚನೆ | 1. ನಿರಾಶ್ರಿತರಿಗೆ ವಸತಿ ಕಲ್ಪಿಸಲಾಯಿತು<br>2. ಉದ್ಯೋಗಾವಕಾಶ ಕಲ್ಪಿಸಲಾಯಿತು<br>3. ಶಿಕ್ಷಣ ಸೌಲಭ್ಯ ಕಲ್ಪಿಸಲಾಯಿತು<br>4. ಆರೋಗ್ಯ ಸೌಲಭ್ಯ ನೀಡಲಾಯಿತು |
| ಭಾಷಾವಾರು ಪ್ರಾಂತ್ಯಗಳ ವಿಂಗಡಣಾ ಕ್ರಮವನ್ನು ಬರೆಯಿರಿ | ಗೋವಾವನ್ನು ಪೋರ್ಚುಗೀಸರಿಂದ ಹೇಗೆ ಮುಕ್ತಗೊಳಿಸಲಾಯಿತು? |
| 1. 1953 ರಲ್ಲಿ ಫಜಲ್ ಅಲಿ ಆಯೋಗ ರಚನೆ<br>2. ಈ ಆಯೋಗ 1956 ರಲ್ಲಿ ವರದಿ ನೀಡಿತು<br>3. ಈ ವರದಿಯನ್ನು 1956 ರಲ್ಲಿ ರಾಜ್ಯ ಪುರ್ನವಿಂಗಡಣಾ ಕಾಯ್ದೆ ಜಾರಿಗೆ ತರಲಾಯಿತು.<br>4. ಭಾಷಾವಾರು ಪ್ರಾಂತ್ಯಗಳ ರಚನೆ | 1. ಗೋವಾದ ಮುಕ್ತಿಗಾಗಿ ಚಳುವಳಿ ಜರುಗಿತು<br>2. ವಿವಿಧ ಭಾಗಗಳಿಂದ ಆಗಮಿಸಿದ ಸತ್ಯಾಗ್ರಹಿಗಳು ಗೋವಾ ವಿಮೋಚನೆಗಾಗಿ ಹೋರಾಡಿದರು<br>3. 1961ರಲ್ಲಿ ಭಾರತೀಯ ಸೇನೆ ಗೋವಾ ಮುಕ್ತಗೊಳಿಸಿತು |


37.6'
ಹಿಂದೂ ಮಹಾಸಾಗರ.
"ಬಂಗಾಳ ಕೊಲ್ಲಿ"
"ಅರಬ್ಬಿ ಸಮುದ್ರ"
1933 KM.
3214 KM.
8.4'
ಶ್ರೀಲಂಕಾ


KRS


K2/ಗಾಡ್ವಿನ್ ಆಸ್ಟಿನ್ (8611 ಮೀ).
ಮೌಂಟ್ ಎವರೆಸ್ಟ್ (8848 ಮೀ).
ಹಿಮಾಲಯ ಪರ್ವತ.
ವಿಂಧ್ಯ ಪರ್ವತ.
ಪೂರ್ವ ಘಟ್ಟಗಳು.
ಲಕ್ಷದ್ವೀಪ (43)


ಹಿಮಾಚಲ ಪ್ರದೇಶ.
ಉತ್ತರಖಂಡ.
ಆಂಧ್ರಪ್ರದೇಶ.




**SAVE TIGERS**

# ಧನ್ಯವಾದಗ

**ಶ್ರೀ ಬಾಳೇಶ ಹತ್ತರಕಿ, ಸಹ ಶಿಕ್ಷಕರು**

**ಸರ್ಕಾರಿ ಪ್ರೌಢಶಾಲೆ, ಹಿರನಾಗಾಂವ**

**ಬಸವಕಲ್ಯಾಣ ತಾಲ್ಲೂಕು, ಬೀದರ ಜಿಲ್ಲೆ–585437**

ballappa57@gmail.com**9972032339**

+